ಅಲ್ಲಿ ಬಂದು ತಮ್ಮ ನೋವನ್ನು ಹೇಳಿದರು. ಏಕೆ 40 ದಿವಸಗಳಿಂದ ಇದು ಪೆಂಡಿಂಗ್ ಇದೆಯೋ ಗೊತ್ತಿಲ್ಲ. ತಕ್ಷಣ ಅದು ರಿಲೀಸ್ ಆಗಿ ಹಣ ಬಿಡುಗಡೆಯಾಗುವ ರೀತಿಯಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮಂತ್ರಿ): ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಅವರು ಹೇಳಿರತಕ್ಕಂಥಾದ್ದು ಏನಿದೆ, ನಾಳೆ ಸಾಯಂಕಾಲದೊಳಗೆ ಇದರ ಬಗ್ಗೆ ಹೇಳುತ್ತೇನೆ.

ಅಧ್ಯಕ್ಷರು: ರೈಟ್. ಮಾನ್ಯ ವಿರೋಧ ಪಕ್ಷದ ನಾಯಕರು.

ಒ) ಹೊಸಕೋಟೆ ತಾಲ್ಲೂಕು ಇಸ್ಸೂರಿನಲ್ಲಿ ನಡೆದ ಅತ್ಯಾಚಾರದ ಬಗ್ಗೆ ಸಿ.ಬಿ.ಐ. ತನಿಖೆ ಬಗ್ಗೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ಒಂದು ಪ್ರಮುಖವಾದಂಥ ವಿಷಯವನ್ನು ನಾನು ಸದನದ ಗಮನಕ್ಕೆ ತರಬೇಕು ಎಂದು ಹೇಳಿ ಇವತ್ತು ನಿಂತಿದ್ದೇನೆ. ಸುಮಾರು ಒಂದು ವರ್ಷ ಒಂದು ತಿಂಗಳ ಹಿಂದೆ ಒಂದು ವಿಷಯವನ್ನು ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೆವು. ಇಸ್ಸೂರು ಅತ್ಯಾಚಾರದ ತನಿಖೆಯನ್ನು ಸಿ.ಬಿ.ಐ.ದವರು ನಡೆಸಬೇಕು ಎನ್ನತಕ್ಕಂಥ ಒಂದು ವಿಷಯವನ್ನು ಈ ಸದನದಲ್ಲಿ ಆವತ್ತು ಪ್ರಸ್ತಾಪ ಮಾಡಿ, ಅದು ಸಿ.ಒ.ಡಿ. ಎನ್‌ಕ್ವೈರಿ ಬೇಡ, ಅದನ್ನು ಸಿ.ಬಿ.ಐ. ಎನ್‌ಕ್ವೈರಿ ಆಗಬೇಕು ಎನ್ನತಕ್ಕಂಥ ವಾದವನ್ನು ನಾವು ಇಲ್ಲಿ ಮಂಡಿಸಿದ್ದೇವೆ. ಆವಾಗ ಹೇಳಿದರು 'ಇಲ್ಲ, ಸಿ.ಓ.ಡಿ. ಎನ್‌ಕ್ವೈರಿನೇ ಸರಿ. ಅಲ್ಲಿ ಏನು ಇವತ್ತು ಹೊಸಕೋಟೆ ತಾಲ್ಲೂಕಿನಲ್ಲಿ ಒಂದು ಹತ್ಯಾಕಾಂಡ ನಡೆಯುತ್ತಿದೆ, ಇದರ ಹಿನ್ನಲೆ ಯಾರು? ಅಲ್ಲಿ ಈಗ ಸುಮಾರು ಮೂರು ಖೂನಿಗಳಾಗಿವೆ. ಒಂದು ಜಯಣ್ಣ ಎನ್ನತಕ್ಕಂಥ ಮುದುಕನದ್ದು. ಅದರ ಹಿಂದೆ ವೆಂಕಟೇಶ ಎನ್ನತಕ್ಕಂಥ ತಾಲ್ಲೂಕು ಪಂಚಾಯತ್ ಸದಸ್ಯರು. ಮೊನ್ನೆ ಕರಿಯಣ್ಣ ಎನ್ನತಕ್ಕಂಥವರದ್ದು.

ಅಂದರೆ, ಈ ಕೊಲೆಗಳು ನಡೆಯಬೇಕೆಂದರೆ ಏನು ಇದರಲ್ಲಿ ರಾಜಕೀಯ ಮುಖಂಡರುಗಳ ಕೈವಾಡ ಇದೆಯೋ ಅಥವಾ ಪೋಲೀಸ್ ಅಧಿಕಾರಿಗಳು ಇದಕ್ಕೆ ಕುಮ್ಮಕ್ಕು ಕೊಟ್ಟು ಈ ಕೊಲೆಗಳನ್ನು ಮಾಡಿಸುತ್ತಿದ್ದಾರೋ ಎನ್ನತಕ್ಕ ಪ್ರಶ್ನೆ ಇವತ್ತು ನಮ್ಮ ಮುಂದೆ ಇದೆ. ಹೊಸಕೋಟೆಯಲ್ಲಿ ಅದೂ ವಿಶೇಷವಾಗಿ ಬೆಂಗಳೂರಿಂದ ಬಹಳ ದೂರ ಇರತಕ್ಕಂಥ ಪ್ರದೇಶವೇನೂ ಅಲ್ಲ. ಕೇವಲ 25 ಕಿಲೋಮೀಟರ್ ಮೇಲೆ ಇರತಕ್ಕಂಥ ಈ ಒಂದು ತಾಲ್ಲೂಕಿನಲ್ಲಿ ಪ್ರತಿ ವರ್ಷ 3-4 ಖೂನಿಗಳು ಆಗಬೇಕೆಂದರೆ ಅದಕ್ಕೆ ಕಾರಣ ಏನು? ಯಾರ ಬೆಂಬಲ ಇದೆ? ಮತ್ತು ನಾವು ಇಲ್ಲಿ ರಾಜಕೀಯವಾಗಿ ಪ್ರಸ್ತಾಪ ಮಾಡಿದಾಗ ಅನೇಕಸಾರಿ, ರಾಜಕೀಯ ಮುಖಂಡರ ಯಾರದಾದರೂ ಹೆಸರು ಹೇಳಿದರೆ, ಅವರು ಇದು ನಮಗೆ ಸಂಬಂಧ ಇಲ್ಲ, ಅಂತಾದ್ದು ಇಲ್ಲ ಇಂಥಾದ್ದು ಇಲ್ಲ

ಎಂದು ಹೇಳಿಕೊಂಡು, ಅವರ ಹೆಸರನ್ನು ಪ್ರಸ್ತಾಪ ಮಾಡಬಾರದು ಎನ್ನುವುದು ಬರುತ್ತದೆ. ಆದರೆ, ರಾಜಾರೋಷವಾಗಿ ಪತ್ರಿಕೆಗಳಲ್ಲಿ ಅವರ ಹೆಸರುಗಳು ಬರುತ್ತಲೇ ಇದೆ. ಅದಕ್ಕೆ ಅವರು ಪ್ರತಿಭಟನೆ ಮಾಡುವುದನ್ನಾದರೂ ಮಾಡಬೇಕು ಇಲ್ಲವೇ ಹೈಕೋರ್ಟಿನಲ್ಲಿ ಹೋಗಿ ಡೆಫಮೇಷನ್ ಕೇಸನ್ನಾದರೂ ಹಾಕಬೇಕು. ಇವರು ಹಾಕಲಿಲ್ಲವೆಂದ ಮೇಲೆ ಏನು ತಿಳಿದುಕೊಳ್ಳಬೇಕು? ಅದರಲ್ಲಿ ಇವರ ಕೈವಾಡಗಳು ಇದೆ ಎನ್ನತಕ್ಕಂತಾದ್ದು ಆಗುತ್ತದೆ. ಇನ್ನೊಂದು ಏನಾಗಿದೆ ಎಂದರೆ, ಇಂತಹ ಘಟನೆಗಳನ್ನು ತಡೆಹಿಡಿಯಬೇಕೆಂದರೆ, ನಮ್ಮ ಅಧಿಕಾರಿಗಳು ಅದರಲ್ಲಿ ಕೇಪಬಲ್ ಇಲ್ಲವೆಂದಾಗ ತಾವು ಸಿಓಡಿಯಿಂದಾಗಲೀ ಅಥವಾ ರೆಗ್ಯುಲರ್ ಪೋಲೀಸರಿಂದ, ಸಿಬಿಐಗಾದರೂ ಕೊಟ್ಟರೆ ಕನಿಷ್ಟಪಕ್ಷ ಒಂದು ಹೆದರಿಕೆ ಹುಟ್ಟಿ ಯಾರು ಯಾರು ಇದಕ್ಕೆ ಸಂಬಂದಪಟ್ಟಂಥ ಪ್ರಮುಖರು ಇದ್ದಾರೋ, ಮುಖಂಡರು ಇದ್ದಾರೋ, ರಾಜಕಾರಣಿಗಳಿದ್ದಾರೋ, ಅವರು ಯಾವುದೇ ಪಕ್ಷದವರು ಇರಲಿ. ಅವರಿಗೆ ಬಲಿ ಹಾಕತಕ್ಕಂತಾದ್ದಾದರೂ ಆಗಬೇಕು. ಹಿಂದೆ ತಾಲ್ಲೂಕು ಪಂಚಾಯ್ತಿ ಸದಸ್ಯರಾದ ವೆಂಕಟೇಶ್ ಅವರನ್ನು ಕೊಲೆಯಾಯಿತು ಎಂದು ಇಸ್ತೂರು ಗ್ರಾಮದಲ್ಲಿ ಒಬ್ಬ ಹೆಣ್ಣುಮಗಳ ಮೇಲೆ ಯುವತಿ ಮೇಲೆ ಅತ್ಯಾಚಾರ ಮಾಡಲಾಯಿತು. ಇಬ್ಬರು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಮಾಡಲಾಯಿತು. ಆ ಮನೆಯಲ್ಲಿರತಕ್ಕಂಥ ಆ ಯುವತಿಯ ಫಾದರ್ ಇನ್ ಲಾ ಅವನ ಕೊಲೆಯನ್ನೂ ಮಾಡಲಾಯಿತು. ಅದಾದ ಮೇಲೆ ಸಿಒಡಿ ತನಿಖೆ ನಡೆಸಬೇಕೆಂದು ಹೇಳಿ ಇದೇ ಸದನದಲ್ಲಿ ಒಪ್ಪಿಕೊಂಡು ಸಿಒಡಿ ತನಿಖೆ ಮಾಡಿದರು. ನಾವು ಹೇಳಿದೆವು, ಸಿಓಡಿ ತನಿಖೆ ಬೇಡ, ಇದರ ಹಿನ್ನೆಲೆಯಲ್ಲಿ ಬಹಳ ದೊಡ್ಡ ದೊಡ್ಡ ರಾಜಕಾರಣಿಗಳು, ಪುಢಾರಿಗಳು ಇದ್ದ ಕಾರಣ ಇದು ಸಿಓಡಿಗೆ ಬಗ್ಗುವುದಿಲ್ಲ. ಅದರಲ್ಲಿಯೂ ಕೂಡ ವಿಶೇಷವಾಗಿ ನನಗೆ ಇದೂ ಅರ್ಥವಾಗುತ್ತಾ ಇಲ್ಲ. ಹೋದಸಾರಿಯೂ ಕೂಡ ಚುನಾವಣೆ ವಿಷಯ ಪ್ರಸ್ತಾಪ ಮಾಡುವಾಗ ನಾನು ಹೇಳಿದೆ. ಒಂದೇ ಜಿಲ್ಲೆಯಲ್ಲಿ, ಒಂದೇ ಕಮ್ಯುನಿಟಿಗೆ ಸೇರಿದಂಥವರು ಹೆಡ್ ಕಾನ್‌ಸ್ಟೇಬಲ್, ಕಾನ್‌ಸ್ಟೇಬಲ್, ಕಾನ್‌ಸ್ಟೇಬಲ್ ಹಿಡಿದುಕೊಂಡು ಡಿ.ಐ.ಜಿ.ವರೆಗೆ ಇದ್ದಾರೆ. ಇದಕ್ಕೆ ನಾವೇನು ಹೇಳಬೇಕು? ನೀವು ಆಗ ಆಕ್ಸಿಡೆಂಟಲ್ ಎಂದು ಹೇಳಿದಿರಿ. ಆಕ್ಸಿಡೆಂಟಲಿ ಅಲ್ಲಿಯೇ ಬರುತ್ತಾರೆಯೇ? ಆಕ್ಸಿಡೆಂಟಲಿ ಸಬ್ ಇನ್ಸ್‌ಪೆಕ್ಟರ್ ಅವರೇ ಆಕ್ಸಿಡೆಂಟಲಿ ಸರ್ಕಲ್ ಇನ್‌ಸ್ಪೆಕ್ಟರೂ ಅವರೇ, ಆಕ್ಸಿಡೆಂಟಲಿ ಡಿವೈಎಸ್‌ಪಿ ಅವರೇ, ಆಕ್ಸಿಡೆಂಟಲಿ ಎಸ್‌ಪಿ ಅವರೇ, ಆಕ್ಸಿಡೆಂಟಲಿ ಡಿಐಜಿಯವರು ಮತ್ತು ಪೋಲೀಸ್ ಠಾಣೆಯಲ್ಲಿ ಎಲ್ಲಾ ಪೋಲೀಸಿನವರೂ ಅವರೇ. ಈ ಮಾತು ತಾವು ಒಪ್ಪಿಕೊಂಡು, ಇದು ಅನ್ಯಾಯವಿದೆ ಸರಿಯಿಲ್ಲ ಎಂದು ತಾವು ಹೇಳಿದಿರಿ. ಹಾಗಾದರೆ ಸರಿಪಡಿಸುವುದನ್ನು ಏಕೆ ಮಾಡಲಿಲ್ಲ? ಎರಡನೆಯದು, ಇವತ್ತು ಈ ಕೊಲೆಗಳೇನು ನಡೆಯುತ್ತಾ ಇದೆ, ನಾವು ಹೇಳಿದ್ದೇವೆ. ಯಾರು ಕೊಲೆಗಾರರು ಇದ್ದಾರೆ ಅವರನ್ನು ಪತ್ತೆಹಚ್ಚಿ, ಇನ್‌ಸ್ಪಿಗೇಟರ್ ಯಾರಿದ್ದಾರೆ ಅವರನ್ನು ಪತ್ತೆ ಹಚ್ಚಿ ಎಂದು ಹೇಳಿದರೆ, ತಾವು ಪತ್ತೆ ಹಚ್ಚಲಿಲ್ಲ. ಕೊನೆಗೆ ಏನಾಯಿತು. ಇನ್ನೊಂದು ಮರ್ಡರ್ ಆಯಿತು. ಇನ್ನೊಂದು ಮರ್ಡರ್ ಮಾಡಿದರೂ

ಕೂಡ, ಅವರಿಗೆ ಅರೆಸ್ಟ್ ಮಾಡತಕ್ಕ ಪರಿಸ್ಥಿತಿ, ಎಷ್ಟೋ ಜನ ಪತ್ರಿಕೆಯಲ್ಲಿ ಬರೆದ ಮೇಲೆ, ಎಲ್ಲಾ ಪತ್ರಿಕೆಗಳಲ್ಲಿ ಬಂದಮೇಲೆ ಅನೇಕ ಜನ ಟೆಲಿಫೋನ್ ಮುಖಾಂತರ ಡಿ.ಜಿ.ಪಿ., ಚೀಫ್ ಮಿನಿಸ್ಟರು ಅವರಿಗೆ, ಇವರಿಗೆ ಮಾತನಾಡಿದ ಮೇಲೆ ಇವತ್ತು ಕೊಲೆಗಾರರಿಗೆ ಹಿಡಿಯತಕ್ಕ, ಅರೆಸ್ಟ್ ಮಾಡತಕ್ಕ ಪ್ರಯತ್ನ ನಡೆಯಬೇಕೆಂದರೆ, ಎಷ್ಟರಮಟ್ಟಿಗೆ ಸರ್ಕಾರದ ಮೇಲೆ ಒತ್ತಡ ಇದೆ. ಮತ್ತು ಎಷ್ಟರಮಟ್ಟಿಗೆ ಸರ್ಕಾರ ನಿರ್ಲಕ್ಷ್ಯದಿಂದ ಕಾಣುತ್ತಿದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಅಧ್ಯಕ್ಷರೇ, ಇವತ್ತು ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ತಾವು ಪರ್ಮಿಷನ್ ಕೊಟ್ಟರೆ, 18-4-98ಕ್ಕೆ ಒಂದು ವಿಶೇಷವಾದ ವರದಿ ಇದೆ. ಇದು ಪತ್ರಿಕೆಯಲ್ಲಿ ಬಂದಿದೆ. ತಮ್ಮ ಗಮನಕ್ಕೆ ಮತ್ತು ಈ ಸದನದ ಗಮನಕ್ಕೆ ತಂದು ನನ್ನ ಮಾತು ಅಲ್ಲಿಗೇ ಮುಗಿಸುತ್ತೇನೆ. ಏಕೆಂದರೆ, ಅದರಲ್ಲಿ ಎಲ್ಲಾ ವಿಷಯಗಳನ್ನೂ ಕೂಡ ಕ್ರೋಢೀಕರಿಸಿದ್ದಾರೆ. ಹೇಗೆ ಇದು ಪ್ರಾರಂಭವಾಯಿತು, ಹೇಗೆ ಇದು ಅಂತ್ಯವಾಯಿತು ಮತ್ತು ಇವತ್ತು ಯಾವರೀತಿಯಾಗಿ ಇದರಲ್ಲಿ ಕೈವಾಡ ಇದೆ ಮತ್ತು ಸಿಓಡಿ ಎನ್‌ಕ್ವೈರಿ ಮಾಡುವುದಕ್ಕೂ ಕೂಡ ಯಾವ ಪೋಲೀಸ್ ಅಧಿಕಾರಿಗಳು ಅಡ್ಡ ಬರುತ್ತಿದ್ದಾರೆ, ರೆಗ್ಯುಲರ್ ಪೋಲೀಸ್ ಅವರು ಕೋಆಪರೇಟೇ ಮಾಡುತ್ತಾ ಇಲ್ಲ. ಅವರೊಂದು ಹೇಳುವುದು, ಇವರೊಂದು ಹೇಳುವುದು. ಈ ಸಿಓಡಿನವರು ಯಾವುದಾದರೊಂದು ಎನ್‌ಕ್ವೈರಿಗೆ ಹೋದರೆ, ಅವರು ಎಲ್ಲೆಲ್ಲಿ ಹೋಗಿದ್ದಾರೆ ಎಂಬ ಮಾತನ್ನು ಯಾರು ಆರೋಪಿಗಳು ಇರುತ್ತಾರೆ ಅಥವಾ ಕಲ್ಪ್ರಿಟ್ಸ್ ಇರುತ್ತಾರೆ ಅವರಿಗೇ ಮೊದಲು ತಿಳಿಸಿಬಿಡುವುದು. ಅಲ್ಲಿಂದ ಅವರು ಹೋಗಿಬಿಡುವುದು. ಇವರು ಅಬ್‌ಸ್ಕಾಂಡಿಂಗ್, ಅಬ್‌ಸ್ಕಾಂಡಿಂಗ್ ಎಂದು ಬರೆದುಕೊಂಡು ಬರುವುದು. ಈ ರೀತಿ ಬರೆದುಕೊಂಡು ಬಂದು ಕೊನೆಗೆ ಇನ್ನೊಂದು ಖೂನಿಯಾಯಿತು. ಈಗ ಇವತ್ತಿನ ಪತ್ರಿಕೆಯಲ್ಲಿದೆ, ಸುಮಾರು ಆರು ಜನರಿಗೆ ಅರೆಸ್ಟ್ ಮಾಡಿದ್ದಾರಂತೆ. ಅದರಲ್ಲಿ ಯಾರು ಯಾರು ಕಲ್ಪ್ರಿಟ್ಸ್ ಇದ್ದಾರೋ, ಅವರ ಹಿನ್ನೆಲೆ ಏನು, ಆ ಒಂದು ಅಂಬಾಸಿಡರ್ ಕಾರು, ಮಾರುತಿ ವ್ಯಾನ್ ಮತ್ತೆ ಯಾವ ಯಾವ ವ್ಯಾನ್‌ಗಳಿದ್ದವು. ಎಷ್ಟಮಟ್ಟಿಗೆ ಸೀಜ್ ಮಾಡಿದ್ದಾರೆ ಎನ್ನತಕ್ಕಂತಾದ್ದು ಕೂಡ ಬರಬೇಕು. ಮತ್ತು ಆ ಕಾರುಗಳು ಯಾರು, ಅದರ ಮಾಲೀಕರು ಯಾರು ಇದ್ದಾರೆ. ಆಮೇಲೆ ಮಾರುತಿ ವ್ಯಾನ್ ಯಾರದು? ಅದರ ಮಾಲೀಕರು ಯಾರು? ಇದೆಲ್ಲವನ್ನೂ ಕೂಡ ತಾವು ವಿಸ್ತಾರವಾಗಿ ಹೇಳಬೇಕಾಗುತ್ತದೆ. ಮತ್ತು ಇದರಲ್ಲಿ ಜನತಾದಳದವರು ಇರಬಹುದು, ಕಾಂಗ್ರೆಸ್‌ನವರು ಇರಬಹುದು, ಬಿಜೆಪಿನವರು ಇರಬಹುದು, ಯಾವ ಪಕ್ಷದವರೇ ಇರಲಿ, ಇದ್ದರೆ ನೀವು ಬಹಿರಂಗಪಡಿಸಿ. ಇವರದು ತಪ್ಪಿದೆ, ಇವರು ತಪ್ಪಿಲ್ಲ ಎಂಬುದನ್ನು ಹೇಳಿ. ಇಲ್ಲದೇ ಇದ್ದರೆ ಏನಾಗುತ್ತದೆಂದರೆ, ಇಂತಹ ಖೂನಿಗಳು, ಇಂತಹ ಕೊಲೆಗಳು ಪ್ರತಿಯೊಂದು ತಾಲ್ಲೂಕಿನಲ್ಲಿ ನಡೆದರೆ, ಖಂಡಿತವಾಗಿಯೂ ಇದರಿಂದ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದಿಲ್ಲ. ಇನ್ನೊಂದು ಏನಾಗುತ್ತದೆ, ಗೂಂಡಾಗಳ ರಾಜ್ಯವಾಗುತ್ತದೆ. ಈ ಗೂಂಡಾಗಳ ರಾಜ್ಯವನ್ನು ನಿಲ್ಲಿಸಬೇಕೆನ್ನುವುದು ಇದ್ದರೆ, ಸರ್ಕಾರ ಜೀವಂತ ಇದೆ

ಎನ್ನತಕ್ಕಂಥ ಒಂದು ಮೆಸೇಜ್ ಆದರೂ ಹೋಗಬೇಕಲ್ಲಾ. ಎಲ್ಲಿದೆ ನಿಮ್ಮ ಮೆಸೇಜ್. ನಾವು ಇವತ್ತೇ ದಿಢೀರ್ ಆಗಿ ಪ್ರಸ್ತಾಪ ಮಾಡುತ್ತೇವೆ ಎಂಬುದಲ್ಲ. ಇದೇ ಮನೆಯಲ್ಲಿ ನಾನು 10-3-97ರಲ್ಲಿ ಪ್ರಸ್ತಾಪ ಮಾಡಿದ್ದೆ. ಒಂದೆರಡು ವಾಕ್ಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ.

> ''ಹೊಸಕೋಟೆ ತಾಲ್ಲೂಕಿನ, ಇಸ್ತೂರಿನಲ್ಲಿ ಮಹಿಳೆಯರಿಬ್ಬರ ಮೇಲೆ ನಡೆದಿರುವ ಅತ್ಯಾಚಾರ ಹಾಗೂ ವ್ಯಕ್ತಿಯೊಬ್ಬರ ಕೊಲೆ ಘಟನೆಯ ತನಿಖೆಯನ್ನು ಸಿಓಡಿಗೆ ಬದಲು, ನ್ಯಾಯಾಂಗ ವಿಚಾರಣೆ ಅಥವಾ ಸಿಬಿಐಗೆ ವಹಿಸಬೇಕೆಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಒತ್ತಾಯಿಸಿದರು.''

ಈಗ ಅದೇ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದೇವೆ. ಅಂದರೆ, ಯಾವ ಮಾತನ್ನು ನಾವು ಒಂದು ವರ್ಷದ ಹಿಂದೆ ಹೇಳಿದ್ದೇವೆ. ಇದನ್ನು ಸಿಬಿಐಗೆ ಒಪ್ಪಿಸಿ ಇಲ್ಲವೇ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿಸಿ, ಇದರೊಳಗೆ ಬಹಳಷ್ಟು ಜನರ ಕೈವಾಡ ಇದೆ. ಇದನ್ನು ತಡೆಗಟ್ಟಬೇಕೆಂದು ಹೇಳಿದರೆ, ತಾವು ಕೇಳಲಿಲ್ಲ. ಕೊನೆಗೆ ಏನಾಯಿತು. ಪುನಃ ಈಗ 6-8 ದಿವಸದಿಂದ ಇನ್ನೊಂದು ಕೊಲೆ ಆಯಿತು. ದೇವನಹಳ್ಳಿ ತಾಲ್ಲೂಕಿನ ಬಾಗಲೂರಿನಲ್ಲಿ ಈ ಒಂದು ಕೊಲೆಯಾಯಿತು. ಮತ್ತು ಸಿಓಡಿನವರು ಇದನ್ನು ಟ್ರೇಸ್‌ಔಟ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಏಕೆ ಆಗಲಿಲ್ಲವೆಂದರೆ, ಈ ಒಂದು ಘಟನೆಯೇ ಅಲ್ಲ. ಈ ಸರಣಿ ಘಟನೆಗಳೇನು ನಡೆದವು. ಆ ಘಟನೆಗಳ ಹಿನ್ನೆಲೆ ಏನು ಎಂಬುದನ್ನು ಕಂಡುಹಿಡಿಯುವುದಕ್ಕೆ ಸಿಓಡಿಗೂ ಕೂಡ ಸಾಧ್ಯವಾಗಲಿಲ್ಲ. ಏಕೆಂದರೆ, ನಿಮ್ಮ ರೆಗ್ಯುಲರ್ ಪೋಲೀಸಿನವರು ಇದಕ್ಕೆ ಬೆಂಬಲ ನೀಡಲಿಲ್ಲ. ಮತ್ತು ಅವರು ನೀಡುವುದಿಲ್ಲವೆಂಬುದು ನಮಗೆ ಖಾತ್ರಿ ಇತ್ತು. ನಾವು ಈ ಸದನದಲ್ಲಿ ಹೇಳಿದ್ದೇವೆ. ಅವರು, ಇವರಿಗೆ ಬೆಂಬಲ ನೀಡುವುದಿಲ್ಲ, ಇಂಪಾರ್ಷಿಯಲ್ ಆಗಿ ಕೆಲಸ ಮಾಡುವುದಿಲ್ಲ, ಅವರು ಸರ್ಕಾರದ ಮಂತ್ರಿಗಳ ಮಾತು ಕೇಳುತ್ತಾರೆ. ಅದರ ಒತ್ತಡ ಇದೆ ಎನ್ನತಕ್ಕಂಥ ಮಾತು ಹೇಳಿದರೂ ಕೂಡ, ನೀವು ಹೇಳಿದಿರಿ. ಇಂಪಾರ್ಷಿಯಲ್ ಆಗಿ ನಾವು ಎನ್‌ಕ್ವೈರಿ ಮಾಡಿಸುತ್ತೇವೆ. ನಾವು ಆ ಕಲ್‌ಪ್ರಿಟ್ಸ್‌ನ ಹಿಡಿಯುತ್ತೇವೆ ಎಂದು ಹೇಳಿದ್ದೀರಿ ಎಲ್ಲಿ ಹಿಡಿದಿರಿ ಸ್ವಾಮಿ? ಇನ್ನೊಂದು ಮರ್ಡರ್ ಮಾಡಿದ ಮೇಲೆ ನೀವು ಹಿಡಿದಿರಿ. ಅಂದರೆ ಇದರ ಅರ್ಥ ಏನು? ಈ ಸರ್ಕಾರ ಪ್ರತ್ಯೇಕವಾಗಿ, ಅಪ್ರತ್ಯಕ್ಷವಾಗಿ ಇದಕ್ಕೆ ಕುಮ್ಮಕ್ಕು ಕೊಡುತ್ತಾ ಇದೆ ಎಂಬ ಮಾತನ್ನು ನಾನು ಹೇಳುತ್ತೇನೆ. ಆಮೇಲೆ, ಇವತ್ತು ಏನಾಗಿದೆ ಅಲ್ಲಿಯ ಪರಿಸ್ಥಿತಿ? ಹೊಸಕೋಟೆ ತಾಲ್ಲೂಕಿನಲ್ಲಿ ರಾಜಕೀಯ ಸಂಘರ್ಷದಿಂದ ಕೊಲೆ ಹಾಗೂ ಅತ್ಯಾಚಾರದ ಪ್ರಕರಣಗಳು ಮರುಕಳಿಸುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿ ಸೇರಿದಂತೆ ಹೊಸಕೋಟೆ ವಿಭಾಗದ ಎಲ್ಲಾ ಪೋಲೀಸ್ ಅಧಿಕಾರಿಗಳನ್ನು ವರ್ಗಾಯಿಸುವಂತೆ ಸಿಓಡಿ ರಾಜ್ಯಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಹೊಸಕೋಟೆ

ತಾಲ್ಲೂಕಿನಲ್ಲಿ ಕಳೆದ ಒಂದು ವರ್ಷದಿಂದ ಈಚೆಗೆ ರಾಜಕೀಯ ಘರ್ಷಣೆಯಿಂದ ಕೊಲೆಗಳು ನಡೆಯಲು ಅಲ್ಲಿನ ಪೋಲೀಸ್ ಅಧಿಕಾರಿಗಳೇ ಕಾರಣ ಎಂದು ದೋಷಾರೋಪಣೆ ಹೊರಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿರುವ ಸಿಓಡಿ, ಕೊಲೆ ಆರೋಪಿಗಳಿಗೆ ಸಚಿವರೊಬ್ಬರು ರಕ್ಷಣೆ ನೀಡುತ್ತಿರುವುದನ್ನು ಮನವರಿಕೆ ಮಾಡಿಕೊಟ್ಟಿದೆ ಎನ್ನತಕ್ಕಂಥ ವರದಿ ಪತ್ರಿಕೆಯಲ್ಲಿ ಕೂಡ ಬಂದಿದೆ.

ಸಿಓಡಿ ರಿಪೋರ್ಟ್ ಸಹ ಬಂದಿದೆ ಎನ್ನತಕ್ಕಂಥ ವರದಿ ಇದೆ. ಅದು ಯಾರು ಎನ್ನತಕ್ಕಂಥಾದ್ದನ್ನು ತಾವು ಬಹಿರಂಗವಾಗಿ ತಿಳಸಬೇಕು. ಆಮೇಲೆ ಹೊಸಕೋಟೆ ತಾಲ್ಲೂಕಿನಲ್ಲಿ ಕಳೆದ ಒಂದು ವರ್ಷದಿಂದ ಈ ಕೃತ್ಯಗಳು ತಾಂಡವವಾಡುತ್ತಿದ್ದು, ನಡುಬೀದಿಯಲ್ಲಿಯೇ ಕೊಲೆಗಳು ಅತ್ಯಾಚಾರಗಳು ನಡೆದು ತಲ್ಲಣಗೊಳಿಸುತ್ತಿದ್ದರೂ ಇದುವರೆಗೂ ಪೋಲೀಸರು ಯಾವ ಆರೋಪಿಗಳನ್ನು ಬಂದಿಸಿಲ್ಲ. ಸಿಓಡಿ ತನಿಖೆಗೂ ಸ್ಥಳೀಯ ಪೋಲೀಸರು ಅಡ್ಡಗಾಲು ಹಾಕುತ್ತಿದ್ದಾರೆಂದು ಹೇಳಲಾಗಿದೆ. ಹೀಗೆ ನಾನು ಒಂದು ಸಂಪೂರ್ಣವಾದ ಮಾಹಿತಿಯನ್ನು ಕೊಡುತ್ತೇನೆ. ಆ ರಿಪೋರ್ಟ್ ಸಹ ಇದೆ. ಕನ್ನಡ ಪ್ರಭಾ ರಿಪೋರ್ಟ್ ಸರಿ ಇಲ್ಲ ಅಂದರೆ, ನೀವು ಸಂಯುಕ್ತ ಕರ್ನಾಟಕ ಪತ್ರಿಕೆಯ ರಿಪೋರ್ಟ್ ನೋಡಬಹುದು, ಸಂಯುಕ್ತ ಕರ್ನಾಟಕ ಪತ್ರಿಕೆ ರಿಪೋರ್ಟ್ ಸರಿ ಇಲ್ಲ ಅಂದರೆ ಪ್ರಜಾವಾಣಿ ಪತ್ರಿಕೆಯ ರಿಪೋರ್ಟ್ ನೋಡಿ. ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಯಾವುದನ್ನು ನೀವು ಅಲ್ಲಗೆಳೆಯುತ್ತೀರಿ?

ಅಧ್ಯಕ್ಷರು: ಕನ್ನಡ ಪ್ರಭಾ ಪತ್ರಿಕೆಯಲ್ಲಿ ಬಂದಿರುವ ರಿಪೋರ್ಟ್ ಸರಿ ಇಲ್ಲ ಅಂದರೆ ಸಂಯುಕ್ತ ಕರ್ನಾಟಕ ರಿಪೋರ್ಟ್ ನೋಡಿ ಎಂದು ಹೇಳಿದ್ದು ಒಳ್ಳೆಯ ಸಲಹೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಸರ್ಕಾರಕ್ಕೆ ಆ ಪತ್ರಿಕೆ ಮೇಲೆ ಪ್ರಿಜಿಡ್ಯೂಸ್ ಇದ್ದರೆ ನಾನು ಏನು ಮಾಡಲಿ? ಇದೇ ಸದನದಲ್ಲಿ ನಾನೇ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಇದಕ್ಕಿಂತ ಬೇರೆ ಸಾಕ್ಷಿ ಇನ್ನು ಏನು ಬೇಕು? ಒಂದು ವರ್ಷದ ಹಿಂದೆ ನಾನೇ ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ ತಾವು ಅಲ್ಲಗಳೆದಿದ್ದೀರಿ. ಸಿಓಡಿಯವರೂ ಸಹ ಒಪ್ಪಿಕೊಂಡಿದ್ದಾರೆ. ಪತ್ರಿಕೆಗಳಲ್ಲಿ ಬಂದಿದ್ದು ಎಲ್ಲಾ ಸುಳ್ಳೇ? ಅದು ಸರಿ ಇಲ್ಲ ಅಂದರೆ ಏನು ನಿಜ ಇದೆ ಅದನ್ನು ನೀವು ಹೇಳಿ. ನಾನು ಹೆಚ್ಚು ಕಾಲಾವಕಾಶ ತೆಗೆದುಕೊಳ್ಳುವುದಿಲ್ಲ. ಅನೇಕ ಜನ ಸಹಿ ಮಾಡಿದವರು ಇದ್ದಾರೆ. ಅವರೂ ಸಹ ಮಾತನಾಡುವವರಿದ್ದಾರೆ. ಈ ವಿಷಯವನ್ನು ಪ್ರಸ್ತಾಪ ಮಾಡಿ ಇದಕ್ಕೆ ಪ್ರಚಾರ ಮಾಡಿಸಿಕೊಳ್ಳಬೇಕು ಎನ್ನುವಂತಹ ದೃಷ್ಟಿಯಿಂದ ನಾನು ಪ್ರಸ್ತಾಪ ಮಾಡುತ್ತಿಲ್ಲ. ಈ ರೀತಿ ಏಕೆ ಆಗುತ್ತಿದೆ? ಈ ರೀತಿ ಒಂದು ತಾಲ್ಲೂಕಿನಲ್ಲಿ ನಡೆದರೆ ಇವತ್ತು ದೇವನಹಳ್ಳಿ ಆಗಬಹುದು, ನಾಳೆ ರಾಮನಗರ ಆಗಬಹುದು, ಕನಕಪುರದಲ್ಲಿ ಆಗಬಹುದು ಅಥವಾ ನಾಳೆ ಬೇರೆ ಜಿಲ್ಲೆಗಳಲ್ಲಿ ಸಹ ಈ ರೀತಿ ನಡೆಯಬಹುದು. ಆಗ ಏನಾಗುತ್ತದೆ ಅಂದರೆ

ಸರ್ಕಾರ ನಮ್ಮ ಹಿಂದೆ ಇದೆ, ಪೋಲೀಸ್ ನಮ್ಮ ಹಿಂದೆ ಇದೆ, ಪೋಲೀಸಿನವರು ನಾವು ಹೇಳಿದ್ದು ಕೇಳುತ್ತಾರೆ ಎನ್ನತಕ್ಕಂಥ ಆತ್ಮವಿಶ್ವಾಸ ರಾಜಕಾರಣಿಗಳಿಗೆ ಹುಟ್ಟಿದರೆ ಇದೇ ರೀತಿ ಅನ್ಯಾಯಗಳು, ಅತ್ಯಾಚಾರಗಳು ದಬ್ಬಾಳಿಕೆಗಳು ನಡೆಯುತ್ತಾ ಇರುತ್ತದೆ ಎನ್ನತಕ್ಕಂಥಾದ್ದನ್ನು ಈ ಸದನದ ಗಮನಕ್ಕೆ ನಾನು ತರುವುದಕ್ಕೆ ಬಯಸುತ್ತೇನೆ. ತಾವು ಈ ಬಗ್ಗೆ ಏನು ಕ್ರಮವನ್ನು ಜರುಗಿಸಿದ್ದೀರಿ? ಕರಿಯಣ್ಣನವರ ಕೊಲೆ ಆದ ಮೇಲೆ ಎಷ್ಟು ಜನ ಆರೋಪಿಗಳನ್ನು ತಾವು ಬಂದಿಸಿದ್ದೀರಿ. ಈ ಹಿಂದೆ ತಮಗೆ ಎಚ್ಚರ ಮಾಡಿಕೊಟ್ಟರೂ ಕೂಡ ಈ ಹಿಂದೆ ಜಯಣ್ಣನ ಕೊಲೆ ಆದಾಗ ಕೂಡ ಮತ್ತು ಅವರ ಸೊಸೆ ಮತ್ತು ಮಗಳ ಮೇಲೆ ಏನು ಅತ್ಯಾಚಾರ ಆಯಿತು ಈಸ್ಟೂರು ಗ್ರಾಮದಲ್ಲಿ ಏನು ಅತ್ಯಾಚಾರ ಆಯಿತು ಆಗ ತಾವು ಕ್ರಮವನ್ನು ಜರುಗಿಸಬೇಕೆಂದು ನಾವು ಹೇಳಿದಾಗ ತಾವು ಏಕೆ ಅವರನ್ನು ಅರೆಸ್ಟ್ ಮಾಡಲಿಲ್ಲ; ಅದಕ್ಕೆ ಏನು ಕಾರಣಗಳು, ಈ ಎಲ್ಲಾ ಮಾಹಿತಿಗಳನ್ನು ಸದನದ ಮುಂದೆ ಇಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

+ ಶ್ರೀ ಸಿ.ಎಂ.ಲಿಂಗಪ್ಪ (ರಾಮನಗರ): ಮಾನ್ಯ ಅಧ್ಯಕ್ಷರೇ, ಈಗತಾನೇ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಿದಂತಹ ವಿಚಾರದಲ್ಲಿ ಹೊಸಕೋಟೆ ತಾಲ್ಲೂಕಿನಲ್ಲಿ ಒಂದು ವರ್ಷ ಎರಡು ತಿಂಗಳಿನಿಂದ ಇತ್ತೀಚೆಗೆ ಆಗಿರತಕ್ಕಂಥ ಸರಣಿ ಕೊಲೆಗಳು. ಮೊದಲನೆಯದಾಗಿ ತಾಲ್ಲೂಕು ಪಂಚಾಯತಿ ಸದಸ್ಯ ವೆಂಕಟೇಶ್. ನಂತರ ಈಸ್ಟೂರು ಸೋಮಣ್ಣ. ಸೋಮಣ್ಣನ ಹಿರಿಯ ಸೊಸೆ ಮತ್ತು ಮಗಳ ಮೇಲೆ ನಡೆದಂತಹ ಸಾಮೂಹಿಕ ಅತ್ಯಾಚಾರ. ಅದರ ಮುಂದುವರಿದ ಭಾಗವಾಗಿ ಮೊನ್ನೆ ತಾನೆ ನಡೆದ ಕರಿಯಣ್ಣನ ಕೊಲೆ. ಇದನ್ನು ನೋಡಿದಾಗ ನಾವ್ಯಾರೂ ಈ ಒಂದು ನಾಗರೀಕ ಸಮಾಜದಲ್ಲಿ ಬಾಳುತ್ತಿದ್ದೇವೆಯೋ ಇಲ್ಲವೋ ಎನ್ನತಕ್ಕಂಥ ಒಂದು ಅನುಮಾನ ನಮಗೆ ಬರತ್ತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೇವಲ ಹೊಸಕೋಟೆ ಒಂದೇ ತಾಲ್ಲೂಕು ಅಲ್ಲ ಇನ್ನೂ ಹೆಚ್ಚಿನ ತಾಲ್ಲೂಕುಗಳು ಇವೆ. ಎಲ್ಲಿಯೂ ಇಲ್ಲದೇ ಇರುವಂತಹ ಒಂದು ವಿಚಿತ್ರವಾದ ಸನ್ನಿವೇಶ ಇವತ್ತು ಆ ತಾಲ್ಲೂಕಿನಲ್ಲಿ ಇದೆ. ಸೋಮಣ್ಣನ ಕೊಲೆ ಮಾಡಿ ಅವನ ಸೊಸೆ ಮತ್ತು ಮಗಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದಂತಹ ಶ್ರೀ ರಾಮಚಂದ್ರಗೌಡ ಎನ್ನತಕ್ಕಂಥ ಮೊದಲ ಅಪರಾಧಿ ಪೋಲೀಸಿನವರ ಪ್ರಕಾರ ಇದುವರೆಗೂ ತಲೆತಪ್ಪಿಸಿಕೊಂಡಿದ್ದ ಎಂದು ಇದೆ. ಇನ್ನೊಂದು ವಿಶೇಷ ಅಂದರೆ ವೆಂಕಟೇಶನ ಕೊಲೆ ಮಾಡಿದ್ದಾನೆ ಎನ್ನುವಂತಹ ಕೊಲೆ ಆಪಾದನೆಯನ್ನು ಹೊತ್ತಿರತಕ್ಕಂಥ ಕರಿಯಣ್ಣನ ಕೊಲೆ ಮೊನ್ನೆ ದಿವಸ ಆದ ಕೂಡಲೇ ರಾಮಚಂದ್ರಗೌಡ ಪೋಲೀಸಿನವರ ಕೈಗೆ ಸಿಗುತ್ತಾನೆ. ನಾನು ನೇರವಾಗಿ ಒಂದು ಆಪಾದನೆಯನ್ನು ಮಾಡುತ್ತಿದ್ದೇನೆ ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಗೃಹಸಚಿವರಿಗೆ. ವೆಂಕಟೇಶನ ಕೊಲೆಯನ್ನು ಮಾಡಿರಬಹುದಾದಂತಹ ಆ ಕೊಲೆ ಆಪಾದನೆಯನ್ನು ಹೊತ್ತಿದ್ದಂತಹ ಕರಿಯಣ್ಣನ

ಕೊಲೆಯನ್ನು ಮಾಡಲಿ ಎಂದೇ ರಾಮಚಂದ್ರಗೌಡನನ್ನು ಪೋಲೀಸಿನವರು ಇದುವರೆಗೂ ಅರೆಸ್ಟ್ ಮಾಡಿರಲಿಲ್ಲ. ಕೊಲೆಯಾದ ಕೂಡಲೇ ರಾಮಚಂದ್ರಗೌಡನನ್ನು ಪೋಲೀಸಿನವರು ಅರೆಸ್ಟ್ ಮಾಡುತ್ತಾರೆ. ಇದು ಕೇವಲ ರಾಮಚಂದ್ರಗೌಡನ ಒಬ್ಬನ ಉದ್ದೇಶವಾಗಿರಲಿಲ್ಲ. ಪೋಲೀಸಿನವರ ಉದ್ದೇಶ ಕೂಡ ರಾಮಚಂದ್ರಗೌಡ ಆ ಕರಿಯಣ್ಣನ ಕೊಲೆ ಮುಗಿಸಲಿ ಎನ್ನತಕ್ಕಂಥ ಒಂದು ವ್ಯವಸ್ಥೆಯನ್ನು ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದರು ಎನ್ನತಕ್ಕಂಥ ಒಂದು ಆರೋಪವನ್ನು ನಾನು ಮಾಡುತ್ತಿದ್ದೇನೆ. ಏಕೆಂದರೆ ಪೋಲೀಸಿನವರ ಪ್ರಕಾರ ರಾಮಚಂದ್ರಗೌಡ ತಲೆತಪ್ಪಿಸಿಕೊಂಡಿದ್ದಾನೆ. ರಾಮಚಂದ್ರಗೌಡ ಹಿಂಡಿಗನಾಳದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಇವತ್ತು ಕೂಡ. ದಿನನಿತ್ಯದ ಎಲ್ಲಾ ವ್ಯವಹಾರಕ್ಕೂ ಕೂಡ ರಾಮಚಂದ್ರಗೌಡನ ಸಹಿ ಬಿದ್ದಿದೆ. ವಾರಕ್ಕೆ ಒಂದು ಸಾರಿ ಬ್ಯಾಂಕಿನಿಂದ ಹಣ ಡ್ರಾ ಮಾಡುವುದಕ್ಕೆ ಸೊಸೈಟಿ ಚೆಕ್ ಪುಸ್ತಕಕ್ಕೆ ರಾಮಚಂದ್ರಗೌಡರ ಸಹಿ ಬಿದ್ದಿದೆ. ಎರಡು ಮೂರು ಸಾರಿ ನಂದಗುಡಿ ಕೆನರಾ ಬ್ಯಾಂಕಿಗೆ ಹೋಗಿ ರಾಮಚಂದ್ರಗೌಡರು ಹಣ ಡ್ರಾ ಮಾಡಿದ್ದಾರೆ. ಅವರು ಯಾವ ಊರಿನಲ್ಲಿ ಇರುತ್ತಾರೆ ಯಾವ ಊರಿನಲ್ಲಿ ಅವಿತುಕೊಳ್ಳುತ್ತಾರೆ ಎನ್ನತಕ್ಕಂಥ ಸ್ಪಷ್ಟವಾದ ಮಾಹಿತಿ ಪೋಲೀಸಿನವರಿಗೆ ಇತ್ತು. ಇಷ್ಟೆಲ್ಲಾ ಗೊತ್ತಿದ್ದರೂ ಸಹ ಇವತ್ತು ಪೋಲೀಸ್ ಇಲಾಖೆ ಸಂಪೂರ್ಣವಾಗಿ ಕರಿಯಣ್ಣನ ಕೊಲೆ ಮಾಡಲಿ ಎನ್ನತಕ್ಕಂಥ ಉದ್ದೇಶ ಇಟ್ಟುಕೊಂಡು ಸಹಾಯ ಮಾಡಿದ್ದಾರೆ. ಈಗಾಗಲೇ ಸಾಕಷ್ಟು ಆಪಾದನೆಗಳನ್ನು ಹೊತ್ತಿದ್ದಂತಹ ರಾಮಚಂದ್ರಗೌಡನಿಗೆ ಅನುವು ಮಾಡಿಕೊಟ್ಟು ಇಡೀ ನಾಗರೀಕ ಸಮಾಜ ತಲೆತಗ್ಗಿಸುವಂತಹ ರೀತಿಯಲ್ಲಿ ಪೋಲೀಸ್ ಇಲಾಖೆ ವರ್ತನೆ ಮಾಡಿದೆ. ಮಾನ್ಯ ಅಧ್ಯಕ್ಷರೇ, ಕರಿಯಣ್ಣನ ಕೊಲೆಯ ದೃಶ್ಯ ನೋಡಿದ ವ್ಯಕ್ತಿಗಳು ಹೇಳುತ್ತಾರೆ. ಅವರು ಸ್ಕೂಟರಿನಲ್ಲಿ ಹೋಗುತ್ತಿದ್ದಾಗ ಅವರ ಹಿಂದಿನಿಂದ ಹೋಗಿ ಕಾರನ್ನು ಟಚ್ ಮಾಡಿದ್ದಾರೆ. ಅವರು ಸ್ಕೂಟರಿನಿಂದ ಬಿದ್ದು ನನ್ನನ್ನು ಕೊಲೆ ಮಾಡುತ್ತಾರೆಂದು ತಿಳಿದು ತಪ್ಪಿಸಿಕೊಳ್ಳಲು ಪ್ರಯತ್ನ ಮಾಡಿದಾಗ ಗದ್ದೆಗೆ ಇಳಿದಾಗ ಹೋಗಿ ಹಿಡಿದುಕೊಂಡು ಅಲ್ಲಿ ಒಂದು ಟ್ರ್ಯಾಕ್ಟರ್ ಇದ್ದರೆ ಒಂದು ಹಗ್ಗ ತೆಗೆದುಕೊಂಡು ಆ ಟ್ರ್ಯಾಕ್ಟರ್‌ಗೂ ಅವನ ದೇಹಕ್ಕೂ ಕಟ್ಟಿ ಗದ್ದೆಯಲ್ಲಿ ಮೊದಲು ಅವನನ್ನು ಸುತ್ತಿಸುತ್ತಾರೆ. ಯಾರೂ ಅವರನ್ನು ತಡೆಯುವುದಕ್ಕೆ ಆಗುವುದಿಲ್ಲ. ಅಮಾನುಷವಾಗಿ ವರ್ತನೆ ಮಾಡಿದಾಗ ಅವನು ಮೂರ್ಚೆ ಹೋದ ಮೇಲೆ ಹಿಡಿದುಕೊಂಡ ಎಲ್ಲಿ ಅಂದರೆ ಅಲ್ಲಿ ಹಿಡಿದುಕೊಂಡು ಕಚಾ ಕಚಾ ಅಂತ ಕತ್ತರಿಸಿ ಬಿಸಾಕಿ ಹೋಗುತ್ತಾರೆ. ಆಗ ರಾಮಚಂದ್ರಗೌಡ ಪೋಲೀಸಿನವರಿಗೆ ಸಿಕ್ಕುತ್ತಾರೆ. ದಯಮಾಡಿ ಪೋಲೀಸ್ ಇಲಾಖೆ ಇಷ್ಟೊಂದು ಪಕ್ಷಪಾತಿಗಳಾಗಿ ನಡೆದುಕೊಳ್ಳಬಾರದಿತ್ತು. ನಿಜ ವೆಂಕಟೇಶನ ಕೊಲೆ ಮಾಡಿದಂತಹ ಕರಿಯಣ್ಣ ಒಳ್ಳೆಯವನೆಂದು ನಾನು ಈಗ ಹೇಳುವುದಿಲ್ಲ. ಅವನ ಆಪಾದನೆ ಸ್ಥಿರವಾದರೆ ಒಳ್ಳೆಯವನು ಎಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ಆದರೆ ವೆಂಕಟೇಶನ ಕೊಲೆ ಮಾಡಿರತಕ್ಕಂಥ ಕರಿಯಣ್ಣನ ಕೊಲೆ ಮಾಡಬೇಕು ಎನ್ನುವಂತಹ ಕೆಲಸ ಆಗಬಾರದು. ಏಕೆಂದರೆ ರಾಮಚಂದ್ರಗೌಡ ಈಗಾಗಲೇ ಒಂದು

ಕೊಲೆ ಎರಡು ಅತ್ಯಾಚಾರದ ಆರೋಪಗಳನ್ನು ಗುರುತರವಾಗಿ ಹೊತ್ತಿದ್ದರೂ ಕೂಡ ಮತ್ತೆ ಎರಡನೇ ಕೊಲೆಯಾದ ಮೇಲೆ ಮತ್ತೆ ರಾಮಚಂದ್ರಗೌಡನ ಕೊಲೆ ಆಗಲಿ ಎಂದು ನಾವ್ಯಾರೂ ಬಯಸುವುದಿಲ್ಲ. ನ್ಯಾಯಾಲಯ ಇದೆ ಅವರು ತಪ್ಪಿತಸ್ಥರಾದರೆ ಅವರಿಗೆ ನ್ಯಾಯಾಲಯ ಶಿಕ್ಷೆ ಕೊಡಬಹುದು. ಅಥವಾ ಅವರು ವಿಮುಕ್ತಿಯಾಗಿ ಹೊರಗಡೆ ಬರಬಹುದು ಅದು ಬೇರೆ ವಿಚಾರ. ಆದರೆ ಪೋಲೀಸ್ ಇಲಾಖೆ ಯಾರದೋ ಒಬ್ಬರ ಕೊಲೆ ಆಗಲಿ ಎನ್ನುವ ದುರುದ್ದೇಶ ಇಟ್ಟುಕೊಂಡು ಇಷ್ಟೊಂದು ನಿಷ್ಠೂರವಾಗಿ ವರ್ತಿಸಿದ್ದು ಸರಿಯಲ್ಲ ಎಂದು ನನಗನಿಸುತ್ತದೆ. ಇದಕ್ಕೆ ರಾಜಕೀಯ ಬಣ್ಣ ಎಂದು ಹೇಳುತ್ತಾರೆ. ಆದರೆ ನನಗೆ ಅದು ಬೇಕಾಗಿಲ್ಲ. 'Ceaser's wife should be above suspicion' ಎಂದು ಒಂದು ಮಾತು ಹೇಳುತ್ತಾರೆ. ರಾಮಚಂದ್ರಗೌಡ ಮೊನ್ನೆತನಕ ವಾಸವಾಗಿದ್ದು ಬೆಂಡಗಾನಹಳ್ಳಿಯಲ್ಲಿ. ನಮ್ಮ ಮಾನ್ಯ ಸಚಿವರ ಸ್ವಂತ ಊರು ಬೆಂಡಗಾನಹಳ್ಳಿ. ಹಿಂದೆ ಅವರು ಅವರ ಹತ್ತಿರದ ಸಂಬಂಧಿ ಎಂದು ಪತ್ರಿಕೆಗಳಲ್ಲಿ ಬರೆಯುತ್ತಾರೆ. ಆಗ ಏನು ಅನಿಸುತ್ತದೆ ಸಾಮಾನ್ಯವಾಗಿ ನಾಗರೀಕರಿಗೆ ಸಚಿವರು ಅವರಿಗೆ ರಕ್ಷಣೆ ಕೊಡುತ್ತಿದ್ದಾರೋ ಏನೋ ಎನ್ನುವ ಅನುಮಾನ ಬರುತ್ತದೆ. ಆ ಒಂದು ಅಭಿಪ್ರಾಯವನ್ನು ಮೂಡಿಸುವುದಕ್ಕೆ ಒಂದು ಅವಕಾಶ ಮಾಡಿಕೊಟ್ಟಿದೆ. ದಯಮಾಡಿ ತಾವು ಸಿಓಡಿ ತನಿಖೆಗೆ ಒಪ್ಪಿಸಿ ಆದ ಮೇಲೆ ಅವರ ಶಿಫಾರಸ್ಸುಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತಂದಿದ್ದರೆ ಈಗ ಕರಿಯಣ್ಣನ ಕೊಲೆ ಆಗುತ್ತಿರಲಿಲ್ಲ. ರಾಮಚಂದ್ರಗೌಡ ಯಾವತ್ತೋ ಸಿಕ್ಕಿಬೀಳುತ್ತಿದ್ದ. ಅವನ ಬೈಲ್ ಮೇಲೆ ಹೊರಗಡೆ ಬರುತ್ತಿದ್ದನೋ ಅಥವಾ ಜೈಲಿನಲ್ಲಿ ಇರುತ್ತಿದ್ದನೋ. ಅದು ಬೇರೆ ವಿಚಾರ. ಆದ್ದರಿಂದ ಸರ್ಕಾರ ಇಂತಹ ಒಂದು ಆಪಾದನೆಯನ್ನು ಹೊತ್ತುಕೊಳ್ಳುವುದಕ್ಕೆ ಗುರಿಯಾಗುವುದು ಬೇಡ. ತಾವು ಕಟ್ಟುನಿಟ್ಟಾಗಿ ವರ್ತಿಸಿ ಅಲ್ಲಿರತಕ್ಕಂಥ ಪೋಲೀಸ್ ಇಲಾಖೆಯ ಇಡೀ ಸಮೂಹವನ್ನು ಎತ್ತಿ ಹೊರಗಡೆ ಹಾಕಿ. ಅವರು ಎಲ್ಲಿ ಹೋದರೂ ಅಷ್ಟೇ. ಅವರು ನಮ್ಮ ರಾಮನಗರಕ್ಕೆ ಬಂದರೂ ಸಹ ಸ್ವಾಮಿ ನಿಷ್ಠೆ. ಅದು ನಮಗೆ ಬೇಕಾಗಿಲ್ಲ. ಅವರಿಗೆ ಕರ್ತವ್ಯ ನಿಷ್ಠೆ ಮಾತ್ರ ಬೇಕು. ಅವರಿಗೆ ತಿಳುವಳಿಕೆ ಹೇಳಿ ಇಂತಹ ಪ್ರಕರಣಗಳು ಮತ್ತೆ ಮರುಕಳಿಸದಂತೆ ಮಾನ್ಯ ಅಧ್ಯಕ್ಷರು ವ್ಯವಸ್ಥೆ ಮಾಡಿಸಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

4.50 ಪಿ.ಎಂ.

+ ಶ್ರೀ ಡಿ.ಕೆ.ಶಿವಕುಮಾರ್ (ಸಾತನೂರು): ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ವಿಚಾರದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಸಿ.ಎಂ.ಲಿಂಗಪ್ಪನವರು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಇದು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ಹೊಸಕೋಟೆಯಲ್ಲಿ ಒಂದು ರೀತಿಯ ಸಂಪ್ರದಾಯವಾಗಿಯೋ ಪರಂಪರೆಯೋ ಆಗಿ ಬೆಳೆದುಕೊಂಡು ಬರುತ್ತಾ ಇದೆ. ಬಹುಶಃ ಇದನ್ನು ಸರಕಾರದವರು ಕೂನೆ ಮಾಡಲಿಲ್ಲ ಅಂದರೆ ಇದು ಬಹಳ ವಿಕೋಪಕ್ಕೆ ಹೋಗುವ ಒಂದು ವಾತಾವರಣ ಕಾಣುತ್ತಾ ಇದೆ.

ಈ ಕೆಟ್ಟ ವಾತಾವರಣವು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ, ಕೋಲಾರ ಜಿಲ್ಲೆಗೆ ಮತ್ತು ಬೆಂಗಳೂರು ಅರ್ಬನ್ ಜಿಲ್ಲೆಗೂ ಕೂಡ ಸ್ವಲ್ಪ ಸ್ವಲ್ಪ ಹಬ್ಬುತ್ತಾ ಬಂದಿದೆ. ಇದನ್ನು ಸರಕಾರದವರು ಇನ್ನೂ ಅಕ್ಕಪಕ್ಕಕ್ಕೆ ವಿಸ್ತರಿಸದೆ ಇರುವ ಹಾಗೆ ಸರಕಾರದವರು ಏನಾದರೂ ಮಾಡಬೇಕು. ಯಾಕೆಂದರೆ ವೆಂಕಟೇಶ್ ಮರ್ಡರ್ ಆದಕೂಡಲೇ, ಸರಕಾರದವರು ಎಚ್ಚೆತ್ತುಕೊಳ್ಳಬೇಕಾಗಿತ್ತು. ಇದಕ್ಕೆ ರಾಜಕಾರಣದ ಬೆಂಬಲ ಇದೆಯೋ ಅಥವಾ ಬೇರೆ ಏನಾದರೂ ಇದೆಯೋ ಏನೋ ಅಂತೂ ಪೇಪರ್‌ನಲ್ಲಿ ನೂರೆಂಟು ವಿಚಾರಗಳನ್ನು ಬರೆಯುತ್ತಾರೆ. ಆ ವಿಚಾರಗಳಿಗೆ ನಾನು ಹೋಗುವುದಿಲ್ಲ. ಯಾಕೆಂದರೆ ಮೊನ್ನೆ ಒಂದು ಪತ್ರಿಕೆಯಲ್ಲಿ ಬರೆದಿದ್ದಾರೆ ಡೆಕ್ಕನ್‌ಹೆರಾಲ್ಡ್‌ನಲ್ಲಿ. 'Key accused in Hoskote Murder case, carries on with his routine activities'. 'He is everywhere but COD says he is absconding' ಅಂದರೆ ಪೋಲೀಸ್‌ನವರೇ ಇದಕ್ಕೆ ಕುಮ್ಮಕ್ಕು ಕೊಟ್ಟ ಹಾಗೆ ಆಗಿದೆ. ಪ್ರತಿಯೊಂದು ಹಂತದಲ್ಲೂ ಕುಮ್ಮಕ್ಕು ಕಾಣುತ್ತದೆ. ಈ ರೆಸ್ಪಾನ್ಸಿಬಿಲಿಟಿಯನ್ನು ಪೋಲೀಸರೇ ತೆಗೆದುಕೊಳ್ಳಬೇಕಾಗುತ್ತದೆ. ಪತ್ರಿಕೆಗಳಲ್ಲಿ ರಾಜಕೀಯ ಮುಖಂಡರುಗಳ ಹೆಸರನ್ನು ಬರೆಯುತ್ತಾರೆ. ನಮ್ಮ ಕ್ಷೇತ್ರದಲ್ಲಾದರೆ ನಮ್ಮ ಹೆಸರು, ಹೊಸಕೋಟೆಯಲ್ಲಾದರೆ ಬಚ್ಚೇಗೌಡರ ಹೆಸರು, ವೆಂಕಟೇಶ್ ಮರ್ಡರ್ ಆಗಿದ್ದಾಗ ನಮ್ಮ ಬೈರೇಗೌಡರು, ಕೃಷ್ಣಾರೆಡ್ಡಿ ಹೋಗಿದ್ದರು, ಬಚ್ಚೆಗೌಡರು ಹೋಗಿದ್ದರು, - ಹೀಗೆ ಅವರೆಲ್ಲರೂ ಹೋಗಿದ್ದಾಗ ಅವರು ಸಪೋರ್ಟ್ ಇದ್ದರು ಅಥವಾ ವಿರೋಧ ಇದ್ದರು ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಮಾನ್ಯ ರೋಷನ್ ಬೇಗ್‌ರವರು ಫಯಾಜ್ ಮರ್ಡರ್ ವಿಚಾರದಲ್ಲಿ ನೋಡಲು ಹೋಗಿದ್ದಾಗ ಅವರ ಮೇಲೂ ಗೂಬೆ ಕೂರಿಸಿದ್ದರು. ಅವೆಲ್ಲಾ ಬರುತ್ತಿರುತ್ತವೆ. ನಾವು ನೇರವಾಗಿ ಇಲ್ಲಿ ರಾಜಕಾರಣ ಹೇಳಲು ಇಷ್ಟವಿಲ್ಲ. ಆದರೆ ಇಲ್ಲಿ ಈ ವಾತಾವರಣವನ್ನು ಒಂದು ಹಂತಕ್ಕೆ ತರಬೇಕಾಗುತ್ತದೆ. ಕಟ್ಟುನಿಟ್ಟಾದ ಕ್ರಮವನ್ನು ತರಬೇಕಾಗುತ್ತದೆ. ಎಲ್ಲಾ ಪಕ್ಷಗಳವರನ್ನು ಕೂರಿಸಿ ಇದನ್ನು ಕೊನೆ ಮಾಡಲು ಏನಾದರೂ ಒಂದು ಪ್ರಯತ್ನವನ್ನು ಮಾಡಿ ಪೋಲೀಸರು ಯಾರು ಇದಕ್ಕೆ ರೆಸ್ಪಾನ್ಸಿಬಲ್ ಆಗಿದ್ದಾರೆ, ಯಾಕೆಂದರೆ ಸಿಓಡಿಯವರು ಇವೊತ್ತು ಹೆಲ್ಪ್‌ಲೆಸ್ ಆಗಿದ್ದಾರೆ ಅಂದರೆ ಇನ್ಯಾರ ಕಡೆಯಿಂದ ನಾವು ಇದನ್ನು ಇನ್‌ವೆಸ್ಟಿಗೇಷನ್ ಮಾಡೋಣ? ಪ್ರತಿಯೊಂದಕ್ಕೂ ಸಿಬಿಐನವರಿಗೆ ಹಾಕಲು ಆಗುವುದಿಲ್ಲ. ಸಿಬಿಐನಲ್ಲಿಯೂ ನಮ್ಮಲ್ಲಿರತಕ್ಕಂಥವರೇ ಇರುವುದು. ಆದ್ದರಿಂದ ಇದಕ್ಕೆ ಏನಾದರೂ ಒಂದು ರಾಜಕೀಯ ಪರಿಹಾರವನ್ನು ಕಂಡುಹಿಡಿಯಬೇಕು. ಇದನ್ನು ಪಕ್ಷಬೇಧವನ್ನು ಮರೆತು ಕಾನೂನಿನ ಚೌಕಟ್ಟಿನಲ್ಲಿ ಇದನ್ನು ಮಾಡುವಂಥ ವ್ಯವಸ್ಥೆಯನ್ನು ಮಾಡಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಇಲ್ಲಿ ಪ್ರತಿಯೊಂದಕ್ಕೂ ರಾಜಕಾರಣದ ಬಣ್ಣ ಕೊಡುವ ಪರಿಪಾಠವಾಗಿದೆ. ಒಂದು ಸೊಸೈಟಿ ವಿಚಾರ ಬಂದಾಗ, ಗ್ರಾಮಪಂಚಾಯತ್, ತಾಲ್ಲೂಕು ಪಂಚಾಯತ್, ಜಿಲ್ಲಾಪಂಚಾಯತ್, ಹೀಗೆ ಯಾವುದೇ ವಿಚಾರ ಬಂದಾಗ ರಾಜಕೀಯದ ಬಣ್ಣ ಬರುತ್ತಾ ಇದೆ. ಇದರಲ್ಲಿ

ನಾವು ರಾಜಕಾರಣಿಗಳು ಸೇರಿಲ್ಲ ಎಂಬುದನ್ನು ತೋರಿಸಲು ನಾವೂ ಕೂಡ ಶುದ್ಧವಾಗಿ ಇರಬೇಕಾಗುತ್ತದೆ. ನಾವೂ ಕೂಡ ಇಂಥ ಕೆಟ್ಟ ವಾತಾವರಣದಿಂದ ದೂರವಿದ್ದೇವೆ ಎಂದು ತೋರಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇದಕ್ಕೆ ಸರಕಾರದವರು ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಮಂತ್ರಿಯವರು ಇದ್ದಾರೆ, ಅವರು ಯುವಕರಾಗಿದ್ದು ಇದರ ಬಗ್ಗೆ ಸೂಕ್ತ ಕಾಳಜಿ ವಹಿಸಿ, ಈ ಬಗ್ಗೆ ಸರಿಯಾದ ಒಂದು ಹೇಳಿಕೆಯನ್ನು ಕೊಟ್ಟು ಮುಂದಕ್ಕೆ ಇಂಥ ಘಟನೆಗಳು ನಡೆಯದ ಹಾಗೆ ಒಂದು ಒಳ್ಳೆಯ ವಾತಾವರಣವನ್ನು ಮೂಡಿಸಲು ಚಾಲನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಲಿಂಗ ರೆಡ್ಡಿ (ಜಯನಗರ): ಮಾನ್ಯ ಅಧ್ಯಕ್ಷರೇ, ಅಲ್ಲಿ ಆಸ್ತಿ ಹಂಚಿಕೊಳ್ಳುವುದಕ್ಕೆ, ರಾಜಕೀಯಕ್ಕೆ ವೆಂಕಟೇಶ್ ಕೊಲೆ ಆಯಿತು. ಅದಾದ ಮೇಲೆ ಕರಿಯಣ್ಣನ ಕೊಲೆ ಆಯಿತು. ಈ ತರಹದ ರಾಜಕೀಯ ಕೊಲೆಗಳು ಸಾಮಾನ್ಯವಾಗಿ ಆಗುತ್ತಿರುತ್ತವೆ. ಕರ್ನಾಟಕದಲ್ಲಿ, ಯು.ಪಿ.ಯಲ್ಲಿ, ಬಿಹಾರದಲ್ಲಿ ಮುಂತಾದ ಎಲ್ಲಾ ಕಡೆಗಳಲ್ಲಿಯೂ ಆಗುತ್ತದೆ. ಹೀಗೆ ಸಾಮಾನ್ಯವಾಗಿ ಎಲ್ಲಾ ದೇಶಗಳಲ್ಲಿಯೂ ಆಗುತ್ತಿರುವುದನ್ನು ಒಪ್ಪಿಕೊಳ್ಳೋಣ. ಆದರೆ ಕರಿಯಣ್ಣನ ತಂಗಿ ಮತ್ತು ಅವರ ಅತ್ತಿಗೆ ಇವರಿಗೆ ಏನು ಮಾಡಿದ್ದರು? ಈ ರಾಮಚಂದ್ರಗೌಡ ಮತ್ತಿತರರು ಹೋಗಿ ಆ ಇಬ್ಬರು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಮಾಡಿದ್ದಾರಲ್ಲಾ, ಇದು ನಾವೆಲ್ಲರೂ ನಾಚಿಕೆ ಪಡುವ ವಿಚಾರ ಅಲ್ಲವೇ? ಹಾಗಾದರೆ ನಮ್ಮ ರಾಜ್ಯದಲ್ಲಿ ಸರಕಾರ ಇಲ್ಲವೇ? ಹೋಂ ಮಿನಿಸ್ಟರ್ ಇಲ್ಲವೇ? ಪೋಲೀಸ್ ಇಲಾಖೆ ಇಲ್ಲವೇ? ನಮ್ಮ ಪೋಲೀಸರು ಇಲ್ಲವೇ? ನಮ್ಮ ಪೋಲೀಸರು ಕತ್ತೆಕಾಯುವುದಕ್ಕೆ ಯೋಗ್ಯರು ಎಂದು ನಾನು ಹೇಳಬೇಕಾಗುತ್ತದೆ. ಆ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರವಾಗಿ ಒಂದು ವರ್ಷ ಒಂದು ತಿಂಗಳಾದರೂ ಕೂಡ ಆಪಾದಿತರನ್ನು ಇದುವರೆಗೂ ಅರೆಸ್ಟ್ ಮಾಡಿಲ್ಲ ಅಂದರೆ ನಾವೆಲ್ಲರೂ ನಾಚಿಕೆ ಪಡಬೇಕು. ರಾಜಕೀಯ ಕೊಲೆಗಳು ಆಗುತ್ತವೆ, ಅದಕ್ಕೆ ನಾನು ಏನೂ ಹೇಳುವುದಿಲ್ಲ. ಕಾಂಗ್ರೆಸ್‌ನವರು, ದಳದವರು, ಬಿಜೆಪಿಯವರು ಮುಂತಾಗಿ ಪರಸ್ಪರರಲ್ಲಿ ಕಾದಾಟ, ಕಚ್ಚಾಟ ಮುಂತಾಗಿ ಆಗುತ್ತವೆ. ಆದರೆ ಈ ಹೆಣ್ಣುಮಕ್ಕಳನ್ನು ಸಾಮೂಹಿಕ ಅತ್ಯಾಚಾರ ಮಾಡಿದ್ದಾರಲ್ಲಾ ಅದನ್ನು ನೋಡಿ ಸುಮ್ಮನೆ ಕುಳಿತಿದ್ದಾರಲ್ಲಾ, ಒಂದು ವರ್ಷ ಒಂದು ತಿಂಗಳಾದರೂ ತಪ್ಪಿತಸ್ಥರನ್ನು ಅರೆಸ್ಟ್ ಮಾಡಿಲ್ಲವಲ್ಲಾ, ಈ ಸರಕಾರಕ್ಕೆ ನಾಚಿಕೆಯಾಗುವುದಿಲ್ಲವೆ? ಸಿ.ಎಂ.ಲಿಂಗಪ್ಪ ಮುಂತಾಗಿ ಎಲ್ಲರೂ ಸವಿಸ್ತಾರವಾಗಿ ಹೇಳಿದರು. ಆರೋಪಿ ಬ್ಯಾಂಕ್‌ನಲ್ಲಿ ದುಡ್ಡು ಡ್ರಾ ಮಾಡಿದ್ದಾನೆ, ಸೊಸೈಟಿಯಲ್ಲಿ ವ್ಯವಹರಿಸಿದ್ದಾನೆ ಅಂದರೆ ಪೋಲೀಸರಿಗೆ ಇದು ಗೊತ್ತಿಲ್ಲವೇ, ನಾಚಿಕೆಯಾಗಬೇಕು. ನಾವೇನು ಬಿಹಾರ್‌ನಲ್ಲಿಯೋ, ಯು.ಪಿ.ಯಲ್ಲಿಯೋ ಇದ್ದೇವೋ ಎಂದು ಅನ್ನಿಸುತ್ತದೆ. ಸರಕಾರವು ಈ ವಿಚಾರದಲ್ಲಿ ರಾಜಿನಾಮೆ ಕೊಡಬೇಕಾಗುತ್ತದೆ. ನಮ್ಮ ಪೋಲೀಸರು ಕತ್ತೆಕಾಯಲು ಹೋಗಬೇಕು.

+ ಶ್ರೀ ಆರ್.ರೋಶನ್ ಬೇಗ್ (ಗೃಹಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ

ವಿರೋಧಪಕ್ಷದ ನಾಯಕರಾದ ಖರ್ಗೆಯವರು, ಸಿ.ಎಂ. ಲಿಂಗಪ್ಪನವರು, ಶಿವಕುಮಾರ್‌ರವರು, ರಾಮಲಿಂಗಾರೆಡ್ಡಿಯವರು, ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಕರಿಯಣ್ಣ ಮರ್ಡರ್ ಆಗಿದ್ದ ಹಿನ್ನಲೆ ಏನೆಂದರೆ, the main accused in the murder of Venkatesh, and Ramachandra Gowda, the main accused in the murder of Karianna ಇವರಿಬ್ಬರಿಗೂ ಲ್ಯಾಂಡ್‌ಡಿಸ್ಪೂಟ್ ವಿಚಾರದಲ್ಲಿ ವಾದವಿವಾದ ಶುರುವಾಗಿತ್ತು. ಹೊಸಕೋಟೆಯ ಹತ್ತಿರ ಪ್ರೇಮಮ್ಮ ಎನ್ನುವವರ ಎರಡು ಎಕರೆ ಜಾಗ ಇತ್ತು. ಆ ಜಾಗವನ್ನು ಪರ್ಚೇಸ್ ಮಾಡುವ ವಿಚಾರದಲ್ಲಿ ಇವರಿಬ್ಬರಲ್ಲಿ ವಾದ - ವಿವಾದ ಆಗಿ ಇವರಲ್ಲಿ ಪೈಪೋಟಿ ಶುರುವಾಗಿತ್ತು. ಹೆಚ್. ಕ್ರಾಸ್ ಹತ್ತಿರ ವೆಂಕಟೇಶನ ಮರ್ಡರ್ ಆಗುತ್ತದೆ. ಈ ಮರ್ಡರ್ ಆದಮೇಲೆ ಈ ರಾಮಕೃಷ್ಣಗೌಡ ಮತ್ತು ಅವರ ಅಸೋಸಿಯೇಟ್ಸ್ ಹೋಗಿ ಸೋಮಣ್ಣನವರ ಕೊಲೆ ಮಾಡಿ, ಸೋಮಣ್ಣನವರ ಮಗಳು ರಾಧ ಮತ್ತು ಸೊಸೆ ಮಂಜುಳಮ್ಮನವರ ಮೇಲೆ ಅತ್ಯಾಚಾರ ಮಾಡಿರುವುದು ನಿಜ. ಮಾನ್ಯ ಸಭಾಧ್ಯಕ್ಷರೇ, ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಇಬ್ಬರಲ್ಲಿ ನಾವು ಯಾರಿಗೂ ರಕ್ಷಣೆ ಕೊಡಬೇಕೆಂದು ಇಲ್ಲ. ರಾಜಕಾರಣಿಗಳಿಗೆ, ಅಲ್ಲಿಯ ಮಂತ್ರಿಗಳಿಗೆ ರಕ್ಷಣೆ ಕೊಡಬೇಕೆಂದು ಏನೂ ಇಲ್ಲ. ಮಾನ್ಯ ಸಿ.ಎಂ. ಲಿಂಗಪ್ಪನವರು ಮತ್ತು ಡಿ.ಕೆ.ಶಿವಕುಮಾರ್‌ರವರು ಹೇಳಿದ ಮಾತುಗಳನ್ನು ಮತ್ತು ಅಲ್ಲಿ ಏಕೆ ಅತ್ಯಾಚಾರವಾಗುತ್ತದೆ ಎಂಬ ಮಾತನ್ನು ನಾನು ಒಪ್ಪುತ್ತೇನೆ. ಒಂದು ವರ್ಷ ಒಂದು ತಿಂಗಳಾದರೂ ಇನ್ನೂ ಆರೋಪಿಗಳು ಏಕೆ ಅರೆಸ್ಟ್ ಆಗಿಲ್ಲ ಎಂದು ಕೇಳಿದ್ದಾರೆ. It must be a lapse on the part of local police. I agree with you. ಮಾನ್ಯ ಸಭಾಧ್ಯಕ್ಷರೆ, ಈ ಕರಿಯಣ್ಣ ಎಂಬುವವರ ಮರ್ಡರ್ ಆದತಕ್ಷಣ ಈ ಆರು ಜನರನ್ನು ನಾವು ಅರೆಸ್ಟ್ ಮಾಡಿದ್ದೇವೆ. On 15.4.98, at around 7.30 a.m Kariyanna, s/o Chikkamuniyappa, aged 34 years, resident of Indignala was murdered within the jurisdiction of Chikkajala Police Station limits. In this connection a case in Chikkajala Police Station Crime No. 57/98 under Sec. 302 IPC has been registered. The main accused, Ramachandra gowda of Indignala village and three others Narayanaswamy, Satish and Muniraju. ಈ ಮೂರು ಜನರನ್ನು 20ನೇ ತಾರೀಖು ಡಿಬ್ಬನಹಳ್ಳಿ ಕ್ರಾಸ್ ಹತ್ತಿರ, ಶಿಡ್ಲಗಟ್ಟ ಮೇಯಿನ್ ರೋಡ್ ಹತ್ತಿರ ಅರೆಸ್ಟ್ ಮಾಡಿದ್ದೇವೆ. ಅವರುಗಳು ಅಂಬಾಸೆಡರ್ ಕಾರ್‌ನಲ್ಲಿ ಹೋಗುವಾಗ ಪೋಲೀಸರು ಚೇಸ್ ಮಾಡಿ ಅರೆಸ್ಟ್ ಮಾಡಿದ್ದಾರೆ. ಆಮೇಲೆ ಇನ್ನಿಬ್ಬರು ನಾಗರಾಜ್ ಮತ್ತು ವಿಜಯಕುಮಾರ್ ಎಂಬ ಅಕ್ಯೂಸ್ಡ್‌ಗಳನ್ನು 21ನೇ ತಾರೀಖು ಬೆಳಿಗ್ಗೆ ಭಾಗ್ಯಲಕ್ಷ್ಮಿ ಲಾಡ್ಜ್, ಚಿಕ್ಕಪೇಟೆ, ಬೆಂಗಳೂರು - ಅಲ್ಲಿಂದ ಅರೆಸ್ಟ್ ಮಾಡಿದ್ದೇವೆ.

ಮಾನ್ಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಸ್ವಲ್ಪ ದಿನಗಳ ಹಿಂದೆ ಈ ವಿಚಾರವನ್ನು ಹೇಳಿದ್ದರು. ಒಂದು ಜನಾಂಗದ ಜನರು ಕಾನ್ಸ್‌ಟೇಬಲ್‌ನಿಂದ ಹಿಡಿದು ಡಿಐಜಿವರೆಗೂ ಇದ್ದಾರೆ ಎಂದು ಅವರು ಹೇಳಿದ್ದಾರೆ. ಅವರ ಸಲಹೆ ಮೇರೆಗೆ ನಾನು ಈಗ ಡಿಐಜಿಯವರನ್ನು ಬದಲಾವಣೆ ಮಾಡಿದ್ದೇನೆ. ಬೇರೆ ಡಿಐಜಿಯವರು ಚಾರ್ಜ್ ತೆಗೆದುಕೊಂಡಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಇದರಲ್ಲಿ ಎನ್‌ಕರೇಜ್ ಮಾಡತಕ್ಕಂಥವರೇ, ಸಬ್ ಇನ್ಸ್‌ಪೆಕ್ಟರ್‌ರಿಂದ ಎಸ್.ಪಿ.ವರೆಗೆ ಇರುತ್ತಾರೆ. ಅವರೆಲ್ಲರನ್ನೂ ಮೊದಲು ಸಸ್ಪೆಂಡ್ ಮಾಡಿ. ಪೆಂಡಿಂಗ್ ಎನ್‌ಕ್ವೈರಿ ಮೊದಲು ಸಸ್ಪೆಂಡ್ ಮಾಡಿ. ಅದನ್ನು ಬಿಟ್ಟು ಡಿಐಜಿಯನ್ನು ಬದಲಾವಣೆ ಮಾಡಿದ್ದಾರೆ ಎಂದು ಹೇಳುತ್ತೀರಿ. ಒಂದೇ ಕಮ್ಯುನಿಟಿಯವರನ್ನು ಸಿಸ್ಟಮೆಟಿಕ್ ಆಗಿ ಇಟ್ಟಿದ್ದೀರಲ್ಲಾ ಎಂಬ ವಿಚಾರದ ಬಗ್ಗೆ ಡಿಐಜಿ ವಿಚಾರವನ್ನು ಹೇಳಿದ್ದು. ಇವೊತ್ತು ಆಪಾದನೆಗಳು ನಿಮ್ಮ ಸರ್ಕಲ್ ಇನ್ಸ್‌ಪೆಕ್ಟರ್ ಮೇಲೆ, ಸರ್ಕಲ್ ಇನ್ಸ್‌ಪೆಕ್ಟರ್ ಮೇಲೆ, ಪ್ರೋತ್ಸಾಹ ನೀಡಿರತಕ್ಕಂಥ ಡಿವೈಎಸ್‌ಪಿ ಮೇಲೆ ಮತ್ತು ನಿಮ್ಮ ಎಸ್.ಪಿ. ಮೇಲೆ ಇದೆ. ನಿಮಗೆ ಈ ಎಲ್ಲಾ ವಿಚಾರಗಳು ಗೊತ್ತಿದೆ. ಗೊತ್ತಿದ್ದೂ ಮಾತಿನ ರಕ್ಷಣೆ ಕೊಡುತ್ತಾ ಇದ್ದೀರಿ. ನಾವೇನು ಮಾಡಬೇಕು? ಆದ್ದರಿಂದ ಮೊದಲು ಅವರಿಗೆ ಸಸ್ಪೆಂಡ್ ಮಾಡಿ ಪೆಂಡಿಂಗ್ ಎನ್‌ಕ್ವೈರಿ ಇಡಿ. ಸಿಓಡಿ ರಿಪೋರ್ಟನ್ನು ಈ ಸದನದ ಮುಂದೆ ಇಡಿ. ಅವರು ಏನು ಹೇಳಿದ್ದಾರೆ ಎಂಬುದು ಗೊತ್ತಾಗುತ್ತದೆ. ಏಕೆಂದರೆ ಆ ರಿಪೋರ್ಟ್ ಕೂಡ ನಿಮ್ಮದ್ದೇ ಆಗಿದೆ.

ಶ್ರೀ ಆರ್.ರೋಷನ್ ಬೇಗ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ವಿಚಾರಗಳ ಬಗ್ಗೆ ನಾವು ಪ್ರೊಸೆಸನ್ನು ಶುರು ಮಾಡಿದ್ದೇವೆ. ಡಿಐಜಿ ಲೆವಲ್‌ನಿಂದ ಅದನ್ನು ಪ್ರಾರಂಭ ಮಾಡಿದ್ದೇವೆ. ಯಾರ್ಯಾರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕೋ ಅದನ್ನೂ ತೆಗೆದುಕೊಳ್ಳುತ್ತೇವೆ. ಇಲ್ಲಿ ಯಾರಿಗೂ ರಕ್ಷಣೆ ಕೊಡಬೇಕಾದಂಥ ಅವಶ್ಯಕತೆ, ಮತ್ತು ಸಂದರ್ಭಗಳು ಏನೂ ಇಲ್ಲ. ಮಾನ್ಯ ಖರ್ಗೆಯವರು ಸಿಓಡಿ ರಿಪೋರ್ಟನ್ನು ಸದನದ ಮುಂದೆ ಇಡಬೇಕೆಂದು ಹೇಳಿದ್ದಾರೆ. ಖಂಡಿತವಾಗಿ ಸಿಓಡಿ ರಿಪೋರ್ಟನ್ನು ಸದನದ ಮುಂದಿಡುತ್ತೇವೆ. That will be abled on the Floor of the House. ಸಿಓಡಿ ರಿಪೋರ್ಟ್ ಮೇಲೆ ಚಾರ್ಜ್‌ಶೀಟ್ ಆಗಿರುತ್ತದೆ. ಇವರ ಮೇಲೆ ಅತ್ಯಾಚಾರ ಮಾಡಿದರಲ್ಲಾ in etaliation case in sidlaghatta Police Station Crime No.50/97 Ramachandra Gowda and others committed the crime and crime No. 40/97 under Sec. 143, 147, 149, 342, 448, 324, 307, 376, 395 and 392. ಈ ಕೇಸ್‌ಗಳನ್ನೆಲ್ಲಾ ಅವರ ಮೇಲೆ ಮಾಡಿ, ಸಿಓಡಿ ರಿಪೋರ್ಟ್ ಮೇಲೆ ಚಾರ್ಜ್‌ಶೀಟ್ ಮಾಡಿದ್ದಾರೆ. ಹಾಗಾದರೆ

ರಾಮಚಂದ್ರಗೌಡರನ್ನು ಬಚಾವ್ ಮಾಡುವುದಾಗಿದ್ದರೆ, ರಕ್ಷಣೆ ಕೊಡುವುದಾಗಿದ್ದರೆ ಆಗಲೇ ಮಾಡಬಹುದಾಗಿತ್ತಲ್ಲವೇ? ರಾಮಚಂದ್ರಗೌಡ ಮತ್ತು ಅವನ ಅಸೋಸಿಯೇಟ್ಸ್ ಯಾರು ಅತ್ಯಾಚಾರ ಮಾಡಿದ್ದರು ಮತ್ತು ಸೋಮಣ್ಣ ಎಂಬವರ ಕೊಲೆಯನ್ನು ಮಾಡಿದ್ದರು ಅವರ ಮೇಲೆ COD itself has chargesheeted ಚಾರ್ಜ್‌ಶೀಟ್ ಮಾಡಿದ ವಿವರಗಳನ್ನು ನಾನು ಹೇಳುತ್ತೇನೆ. Both cases of Sidlaghatta Police Station and Nandagudi Police Station Crime No. 40/97 are investigated by the COD. Crime No.40/97 has been charge sheeted in Crime No.34/98 before C.J.M of Hoskote. ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರುಗಳು ಎಲ್ಲರೂ ಈ ವಿಚಾರದಲ್ಲಿ ಏನು ಸಲಹೆಗಳನ್ನು ಮತ್ತು ವಿಚಾರಗಳನ್ನು ಹೇಳಿದ್ದಾರೆ. ಆರೋಪಿಯು ಮಿಲ್ಕ್‌ಫೆಡರೇಶನ್‌ನ ಪ್ರೆಸಿಡೆಂಟ್ ಆಗಿದ್ದಾಗ 2-3 ಸಾರಿ ಬ್ಯಾಂಕ್‌ಗೆ ಹೋಗಿ ಹಣವನ್ನು ಡ್ರಾ ಮಾಡಿದ್ದರೂ ಏಕೆ ಅರೆಸ್ಟ್ ಮಾಡಿಲ್ಲ ಎಂದು ಕೇಳಿದ್ದಾರೆ. ಅಂತೆಯೇ ವಿರೋಧ ಪಕ್ಷದ ನಾಯಕರು ಸಬ್‌ಇನ್ಸ್‌ಪೆಕ್ಟರ್‌ರಿಂದ ಹಿಡಿದು ಎಸ್‌ಪಿಯವರೆಗೆ ಏತಕ್ಕೆ ಕ್ರಮ ತೆಗದುಕೊಂಡಿಲ್ಲ ಎಂದು ಕೇಳಿದ್ದಾರೆ. ನಾನು ತಮ್ಮ ಮೂಲಕ ಅವರಿಗೆ ಆಶ್ವಾಸನೆಯನ್ನು ಕೊಡಬಯಸುತ್ತೇನೆ. Action will be taken against everybody. ಯಾರು ಸಬ್‌ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್, ಮುಂತಾಗಿ ಯಾರು ಸಂಬಂಧಪಟ್ಟಿದ್ದಾರೆ ಅವರೆಲ್ಲರ ಮೇಲೆಯೂ ಕ್ರಮ ತೆಗೆದುಕೊಳ್ಳುತ್ತೇವೆ. All accused and associates are arrested. They have been remanded to judicial custody.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಬಾರದೆಂದು ತಾವು ಹೇಳಿದ್ದೀರಿ. ಆದರೂ ತಮ್ಮ ಅಪ್ಪಣೆ ಪಡೆದು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ತಾವೇ ಈ ವಿಚಾರದಲ್ಲಿ ಪೋಲೀಸರ ಲ್ಯಾಪ್ಸ್ ಇದೆಯೆಂದು ಒಪ್ಪಿಕೊಂಡಿದ್ದೀರಿ. It is a lapse on the part of the police in this case, We will take action, ಎಂದು ತಾವೇ ಹೇಳಿದ್ದೀರಿ. ಯಾವಾಗ ತಮಗೆ ಅದರ ಬಗ್ಗೆ ಮನವರಿಕೆಯಾದ ಮೇಲೆ ಆ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಬೇಕು. ಸ್ಥಳೀಯ ಪೋಲೀಸರು ಈ ವಿಚಾರದಲ್ಲಿ ಸಹಕಾರ ನೀಡುತ್ತಿರಲಿಲ್ಲ, ಸಿಓಡಿಯವರು ಮಾತ್ರ ಚಾರ್ಜ್‌ಶೀಟ್ ಫೈಲ್ ಮಾಡಿದ್ದಾರೆ ಎಂದು ತಮ್ಮ ಹೇಳಿಕೆಯ ಮೂಲಕ ತಿಳಿದುಬಂದಿರುತ್ತದೆ. ಅಂದರೆ ಸಿಓಡಿಯವರು ತನಿಖೆ ಮಾಡುವವರೆಗೆ ಸ್ಥಳೀಯ ಪೋಲೀಸರು not only they were non-cooperative with COD, they were encouraging Ramachandragowda; they were protecting, ಕೊನೆಗೆ ಕರಿಯಣ್ಣ ಎಂಬುವವರನ್ನು ಕೊಲೆ ಮಾಡುವವರೆಗೆ ಅವರನ್ನು

ರಕ್ಷಣೆ ಮಾಡಿಕೊಂಡು ಬಂದರು, ಅರೆಸ್ಟ್ ಸಹ ಮಾಡಲಿಲ್ಲ. ಅವನು ಹಾಲಿನ ಸೊಸೈಟಿಯಲ್ಲಿ ಚಕ್ ಮೇಲೆ ಸಹಿ ಮಾಡುತ್ತಿದ್ದ. ಕೆನರಾಬ್ಯಾಂಕ್‌ಗೆ ಹೋಗಿ ಹಣವನ್ನೂ ತರುತ್ತಿದ್ದ, ಭಾನುವಾರಗಳಂದು ಸಭೆಯನ್ನು ನಡೆಸುತ್ತಿದ್ದ ಎಂದು ಮಾನ್ಯ ಲಿಂಗಪ್ಪನವರು ಹೇಳಿದ್ದಾರೆ. ಮತ್ತು ಆ ವರದಿಯಲ್ಲಿ ಸಹ ಇದೆ. ಇಷ್ಟೆಲ್ಲಾ ಇದ್ದರೂ ಸ್ಥಳೀಯ ಪೋಲೀಸರು ಕ್ರಮ ತೆಗೆದುಕೊಳ್ಳದಿದ್ದಾಗ ಯಾರು ತಪ್ಪು ಮಾಡಿದ್ದಾರೋ ಅವರಿಗೆ ಶಿಕ್ಷೆ ಕೊಡಬೇಕಲ್ಲವೇ? ಆದ್ದರಿಂದ you can take action; suspend them pending detailed enquiry. ಅಲ್ಲಿಯವರೆಗೆ ಬೇರೆಯವರಿಗೆ ಆ ಜಾಗದಲ್ಲಿ ಹಾಕಿ.

ಶ್ರೀ ಆರ್.ರೋಷನ್‌ಬೇಗ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಲಿಂಗಪ್ಪನವರು, ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಸದಸ್ಯರುಗಳೇನು ಹೇಳಿದ್ದಾರೆ ಅದಕ್ಕೆ ಸಂಬಂಧಪಟ್ಟಂತೆ ಸ್ಥಳೀಯ ಪೋಲೀಸರ ಕರ್ತವ್ಯ ಚ್ಯುತಿಯಾಗಿದೆಯೆಂದು ಹೇಳಿದ್ದೇನೆ. ನಾನು ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಯಾರನ್ನಾದರೂ ಸಸ್ಪೆಂಡ್ ಮಾಡಬೇಕಿದ್ದರೆ ಖಂಡಿತವಾಗಿ ಮಾಡುತ್ತೇವೆ. ಮಾನ್ಯ ಶಿವಕುಮಾರ್‌ರವರು ಇದಕ್ಕೆ ರಾಜಕೀಯ ಸಲ್ಯೂಷನ್ ಕೊಡಬೇಕೆಂದು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಮೂರು ಇಲ್ಲವೆ ನಾಲ್ಕನೆಯ ತಾರೀಖು ಬೆಂಗಳೂರು ಗ್ರಾಮಾಂತರಕ್ಕೆ ಸಂಬಂಧಪಟ್ಟಂತೆ ಎಲ್ಲಾ ಶಾಸಕರುಗಳ ಸಭೆಯನ್ನು ನನ್ನ ಕಛೇರಿಯಲ್ಲಿ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಒಂದು ವರ್ಷದ ಹಿಂದೆ ಈ ಸದನದಲ್ಲಿ ನಾವು ಇದರ ಬಗ್ಗೆ ಪ್ರಸ್ತಾಪ ಮಾಡಿ ಎಚ್ಚರಿಕೆ ನೀಡಿದ್ದೆವು. ಗೃಹ ಇಲಾಖೆ ಎಚ್ಚರದಿಂದ ಇರಬೇಕೆಂದು ಹೇಳಿದ್ದೆವು.

ಅಧ್ಯಕ್ಷರು: ತಾವು ಹೇಳಿದ್ದ ವರ್ಷನ್ ಮೇಲೆಯೇ ಅಲ್ಲಿ ಸ್ಥಳೀಯ ಪೋಲೀಸರ ಲ್ಯಾಪ್ಸ್ ಆಗಿದೆಯೆಂದು ಅವರು ಹೇಳಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಹೇಳುವುದಿರಲಿ, ಸಿ.ಓ.ಡಿ.ಯ ವರದಿಯಲ್ಲೇ ಆ ರೀತಿ ಹೇಳಿದ್ದಾರೆ. ಸಿ.ಓ.ಡಿ.ಯವರೇ ಚಾರ್ಜ್‌ಶೀಟ್ ಹಾಕಿದ್ದಾರೆಂದು ಹೇಳಿದ್ದಾರೆ.

MR. SPEAKER: There must have been lapses. I will immediately get hold of the facts and I will not hesitate to take action. I will take action immediately ಎಂದು ಹೇಳಿದರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ ಅದನ್ನು ಹೇಳಿ, ನಾಳೆ, ಇಲ್ಲವೇ ನಾಡಿದ್ದು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿಬಿಡಿ. ಒಂದು ವರ್ಷದ ಹಿಂದೆಯೇ ಇದು ನಡೆದಿದೆಯೆಂದು ಎಲ್ಲರಿಗು ಗೊತ್ತಿದ್ದರೂ ನಾನು ಕ್ರಮ ತೆಗೆದುಕೊಳ್ಳಲು ಸ್ವಲ್ಪ ಸಮಯ ಬೇಕು ಎಂದರೆ ಹೇಗೆ? ನಾಳೆ, ಇಲ್ಲವೆ ನಾಡಿದ್ದು ಕ್ರಮ ತೆಗದುಕೊಳ್ಳುವ ಬಗ್ಗೆ ಅವರು ಭರವಸೆ ನೀಡಬೇಕು.

MR. SPEAKER: At the earliest.

SRI M.P.PRAKASH: It is the bounden duty of the COD to file charge-sheet...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಲ್ಲಿ ಸ್ಥಳೀಯ ಪೋಲೀಸರಿಂದ ಲ್ಯಾಪ್ಸ್ ಆಗಿದೆ. ಅವರು ಅಪರಾಧಿಯನ್ನು ಮೊದಲೇ ಪತ್ತೆ ಮಾಡಿದ್ದರೆ ಮುಂದಿನ ಕೊಲೆಗಳು ಆಗುತ್ತಿರಲಿಲ್ಲ. ಕೊನೆಗೆ ಸಿ.ಓ.ಡಿ. ಅಲ್ಲಿಗೆ ಹೋದಮೇಲೆ ಸ್ವಲ್ಪ ರೂಪ ಬಂತು. ಯಾರು ನಿಜವಾದಂಥ ಕಲ್‌ಪ್ರಿಟ್ಸ್ ಇದ್ದರು ಅವರ ವಿರುದ್ಧ ಈಗ ಚಾರ್ಜ್‌ಶೀಟ್ ಹಾಕಿದರು. ಒಂದು ವೇಳೆ ಮೊದಲೇ ಹಾಕಿದ್ದರೆ ಕರಿಯಣ್ಣನವರ ಕೊಲೆಯಾಗುತ್ತಿರಲಿಲ್ಲ.

ಅಧ್ಯಕ್ಷರು: ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ, ಹಾಗಿದ್ದಮೇಲೆ ಇದರ ಬಗ್ಗೆ ಮಾತು ಬೆಳೆಸಿಕೊಂಡು ಹೋಗುವುದು ಒಳ್ಳೆಯದಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ದಯಮಾಡಿ ತಾವು ಕ್ಷಮಿಸಬೇಕು, ಇದರ ಬಗ್ಗೆ ಹಿಂದೆಯೂ ಹಾಗೆಯೇ ಹೇಳಿದ್ದಾರೆ. ಈಗಲೂ ಅದೇ ಉತ್ತರ ನೀಡುತ್ತಾರೆಂದರೆ ಸರಿಯಲ್ಲ. ಎರಡು, ಮೂರು ದಿವಸ ತೆಗೆದುಕೊಳ್ಳಲಿ, ಆದರೆ ಎಷ್ಟು ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ ಎಂಬುದನ್ನು ನಿಖರವಾಗಿ ಹೇಳಬೇಕು.

ಅಧ್ಯಕ್ಷರು: ಆ ರೀತಿ ಸಮಯ ನಿಗದಿ ಮಾಡುವುದು ಕಷ್ಟವಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಹಾಗಿದ್ದರೆ ಸರ್ವೇಸಾಮಾನ್ಯವಾಗಿ ಈ ಪ್ರಕರಣದ ಹಿಂದೆ ಯಾರದೋ ಕೈವಾಡವಿದೆ, ಯಾರೋ ಇದ್ದಾರೆ ಎನ್ನತಕ್ಕ ಮಾತನ್ನು ಹೇಳಬೇಕಾಗುತ್ತದೆ.

ಶ್ರೀ ರಾಮಲಿಂಗರೆಡ್ಡಿ (ಜಯನಗರ): ಮಾನ್ಯ ಅಧ್ಯಕ್ಷರೆ, ಕೇವಲ ಕೊಲೆಯಾಗಿದ್ದರೆ ಪರವಾಗಿರಲಿಲ್ಲ, ಸಾಮಾನ್ಯವಾಗಿ ಕೊಲೆಗಳು ಆಗುತ್ತಿರುತ್ತದೆ. ಆದರೆ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಮಾಡಿರುವ ಈ ಪ್ರಕರಣದಲ್ಲಿ ಸರ್ಕಾರ ಗಂಭೀರವಾಗಿ ಪರಿಗಣಿಸುವುದಿಲ್ಲವೆಂದರೆ ಸರಿಯಲ್ಲ. ಬೆಂಗಳೂರು ಗ್ರಾಮಾಂತರ ಶಾಸಕರುಗಳ

ಸಭೆಯನ್ನು ಕರೆಯುವುದರಿಂದ ಸಮಸ್ಯೆ ಪರಿಹಾರವಾಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಡಿ.ಐ.ಜಿ.ರವರನ್ನು ವರ್ಗಾವಣೆ ಮಾಡಿದ್ದೇವೆಂದು ಹೇಳಿದ್ದಾರೆ. ಅವರನ್ನು ವರ್ಗ ಮಾಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಡಿ.ಐ.ಜಿ ಮಟ್ಟದಿಂದ ಈ ಕೆಲಸವಾಗುವುದಿಲ್ಲ. ಯಾವ ಊರಿನಲ್ಲಿ ಏನಾಗುತ್ತದೆ, ಎಲ್ಲಿ ಕಳ್ಳತನವಾಗುತ್ತದೆ ಎಂಬುದನ್ನು ಡಿ.ಐ.ಜಿ ನೋಡುವುದಿಲ್ಲ. ಇವೆಲ್ಲವೂ ಸಂಬಂಧಪಟ್ಟ ಪೋಲೀಸ್ ಠಾಣೆಯ ಎಸ್.ಐ., ಸಿ.ಐ, ಡಿ.ವೈ.ಎಸ್.ಪಿ, ಎಸ್.ಪಿ. ಮಟ್ಟದಲ್ಲಿ ನಡೆಯತಕ್ಕದ್ದು. ಒಂದು ವರ್ಷದ ಹಿಂದೆ ವೆಂಕಟೇಶ್‌ರವರ ಕೊಲೆಯಾದಾಗಲೇ ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೆ. ಹೊಸಕೋಟೆಯಲ್ಲಿ ಕೊಲೆಯಾಗಿರುವ ಈ ವಿಚಾರದ ಬಗ್ಗೆ ಸಂಜೆವಾಣಿ ಪತ್ರಿಕೆಯಲ್ಲಿ ಬಂದಕೂಡಲೇ ನಾನು ಸಂಜೆ 5-30ರಲ್ಲಿ ಇಲ್ಲಿ ಪ್ರಸ್ತಾಪ ಮಾಡಿದ್ದೆ. ಕಾನೂನು ವ್ಯವಸ್ಥೆ ಹೊಸಕೋಟೆಯಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ನಿಷ್ಕ್ರಿಯೆಗೊಂಡಿದೆ ಎಂದು ಹೇಳಿದ್ದೆ. ಇದು ಸೂಕ್ಷ್ಮವಾಗಿರತಕ್ಕ ಸ್ಥಳ. ಗಂಭೀರವಾದ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಇದರ ಬಗ್ಗೆ ಎಚ್ಚರಿಕೆ ವಹಿಸಬೇಕಾಗಿರತಕ್ಕವರು ಅಲ್ಲಿನ ಎಸ್.ಪಿ.ಯವರು. ಮಾನ್ಯ ಗೃಹ ಸಚಿವರೇ ಅತ್ಯಾಚಾರ ನಡೆದಿರುವ ಬಗ್ಗೆ ಒಪ್ಪಿಕೊಂಡಿದ್ದಾರೆ. ಆದರೆ ಇಲ್ಲಿ ಡಿ.ಐ.ಜಿ.ರವರನ್ನು ವರ್ಗಾವಣೆ ಮಾಡುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಸಿ.ಓ.ಡಿ. ವರದಿಯನ್ವಯ ಇಲ್ಲಿ ಮೇಲುನೋಟಕ್ಕೆ ತಪ್ಪಾಗಿದೆಯೆಂದು ತೀರ್ಮಾನವಾಗಿದೆ. ಇದು ರಾಜಕೀಯ ಹೋರಾಟವಿರಬಹುದು, ಆದರೆ ಅಲ್ಲಿ ಶಾಂತಿಯನ್ನು ಕಾಪಾಡತಕ್ಕದ್ದು ಸಂಬಂಧಪಟ್ಟ ಪೋಲೀಸ್ ಠಾಣೆಯ ಕರ್ತವ್ಯ. ಅಲ್ಲಿರುವ ಎಲ್ಲರನ್ನೂ ಬೇರೆ ಕಡೆಗೆ ಹಾಕಬೇಕೇ ಹೊರತು ಡಿ.ಐ.ಜಿ.ರವರನ್ನು ವರ್ಗ ಮಾಡುವುದರಿಂದ ನ್ಯಾಯ ದೊರಕುವುದಿಲ್ಲ. ಇದು ಅಕ್ಷಮ್ಯ ಅಪರಾಧವಾಗುತ್ತದೆ, ಸರ್ಕಾರದ ಉತ್ತರ ನಾಚಿಕೆಗೇಡಿನ ಉತ್ತರವಾಗುತ್ತದೆ.

ಶ್ರೀ ಆರ್.ರೋಷನ್‌ಬೇಗ್ (ಗೃಹ ಸಚಿವರು): ಡಿ.ಐ.ಜಿ. ವರ್ಗಾವಣೆಯು ಈ ಕೇಸ್‌ಗೆ ಸಂಬಂಧಪಡುವುದಿಲ್ಲ. ಹೋದಸಲ ಬೇರೆ ಇಷ್ಯೂ ಇಲ್ಲಿ ಚರ್ಚೆಗೆ ಬಂದಾಗ ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಒಂದೇ ಜನಾಂಗದ ಅಧಿಕಾರಿಗಳು ಇದ್ದಾರೆಂದು ಹೇಳಿದಮೇಲೆ ಅವರ ಸಲಹೆ ತೆಗೆದುಕೊಂಡು ವರ್ಗಾವಣೆ ಮಾಡಿರತಕ್ಕದ್ದು. ಡಿ.ಐ.ಜಿ.ರವರಿಗೂ ಈ ಕೇಸ್‌ಗೂ ಯಾವುದೇ ಸಂಬಂಧವಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತಿತರ ಸದಸ್ಯರುಗಳು ಹೇಳಿದ ವಿಚಾರಕ್ಕೆ ಪೂರಕವಾಗಿ based on that, I said there must have been lapse. I am not trying to shield anybody. I said yes, I will examine, ಎಂದು ಹೇಳಿದ್ದೇನೆ. ಅದರ ಬಗ್ಗೆ ಮಾಹಿತಿ ತರಿಸಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಲು ಸ್ವಲ್ಪ ಸಮಯ ಕೊಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ಬಹಳ ಗಂಭೀರವಾದ ವಿಚಾರ. ಒಂದು ವರ್ಷ ಮೊದಲೇ ಇದರ ಬಗ್ಗೆ ಗೊತ್ತಾಗಿದೆ. ಇಲ್ಲಿ ಅಧಿಕಾರಿಗಳು ತಪ್ಪು ಮಾಡಿದ್ದಾರೆಂದು ಗೊತ್ತಿದ್ದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರೆ ಬಹಳ ಅನ್ಯಾಯವಾಗುತ್ತದೆ.

ಅಧ್ಯಕ್ಷರು: ಅವರು ಕ್ರಮ ತೆಗೆದುಕೊಳ್ಳುವುದಿಲ್ಲವೆಂದು ಹೇಳಲೇ ಇಲ್ಲ. ಸ್ವಲ್ಪ ಸಮಯ ಕೇಳಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ಇದರ ಬಗ್ಗೆ ಇವತ್ತು ಪ್ರಸ್ತಾಪ ಮಾಡುತ್ತಿಲ್ಲ, ಒಂದು ವರ್ಷದ ಹಿಂದೆಯೇ ಮಾಡಿದ್ದೇವೆ. 11-3-97ರಂದು ಇದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಇದರಲ್ಲಿ ರಾಜಕೀಯ ಕೈವಾಡವಿರುತ್ತದೆ, ನ್ಯಾಯ ಸಿಗುವುದಿಲ್ಲವೆಂದು ಹಿಂದೆಯೇ ಕೇಳಿಕೊಂಡಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಅತ್ಯಾಚಾರವಾಗಿರುವುದು ನಿಜ, ಆರೋಪಿಗಳನ್ನು ಹಿಡಿಯುವಲ್ಲಿ ಪೋಲೀಸರು ವಿಫಲರಾಗಿದ್ದಾರೆ ಎಂಬುದನ್ನು ಒಪ್ಪಿಕೊಂಡಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲೇಬೇಕಲ್ಲವೇ?

ಶ್ರೀ ಎಂ.ಪಿ.ಪ್ರಕಾಶ್: ಇದು ಬಹಳ ಗಂಭೀರವಾದಂಥ ವಿಚಾರ. ನಾಗರೀಕ ಸಮಾಜದಲ್ಲಿ ಯಾರಾದರೂ ಸಹ ತಲೆ ತಗ್ಗಿಸುವಂಥ ವಿಚಾರವಿದು. It was a lapse on the part of the police, I will certainly go into that and we will certainly take action against them. ಎಂದು ಹೇಳಿದ್ದಾರೆ. ತಾವು ಈ ದಿವಸವೇ ಕ್ರಮ ತೆಗೆದುಕೊಳ್ಳಿ ಎಂದರೆ ಹೇಗೆ?

ಶ್ರೀ ವಾಟಾಳ್‌ನಾಗರಾಜ್: ಅತ್ಯಾಚಾರವಾಗಿರುವುದನ್ನು ಅವರೇ ಒಪ್ಪಿದ್ದಾರೆ. ಆರೋಪಿಗಳನ್ನು ಹಿಡಿಯುವಲ್ಲಿ ಪೋಲೀಸರು ಸಂಪೂರ್ಣವಾಗಿ ವಿಫಲರಾಗಿದ್ದಾರೆಂದು ಹೇಳಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ಇಂತಿಷ್ಟು ಸಮಯದಲ್ಲಿ, ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ವಿರೋಧ ಪಕ್ಷದ ನಾಯಕರೂ ಸರ್ಕಾರವನ್ನು ನಡೆಸಿದ್ದಾರೆ. ಇದರಲ್ಲಿ ನಾಗರೀಕರು ತಲೆತಗ್ಗಿಸುವಂಥ ಕೆಲಸವಾಗಿದೆ. ಮಾನ್ಯ ರಾಮಲಿಂಗಾರೆಡ್ಡಿಯವರು ಅಭಿಪ್ರಾಯವನ್ನು ವ್ಯಕ್ತಪಡಿಸಿರತಕ್ಕದ್ದು ಅವರ ತೀವ್ರ ಭಾವನೆಗಳ ಮೂಲಕ ಆಗಿರತಕ್ಕದ್ದು. ಇದರ ಬಗ್ಗೆ ಬೇರೆ ಅಭಿಪ್ರಾಯವಿಲ್ಲ. ಆದರೆ ಸಚಿವರು ತತಕ್ಷಣದಲ್ಲೇ ಇಂತಹ ಕ್ರಮ ತೆಗೆದುಕೊಳ್ಳುತ್ತೇವೆಂದು ತಿಳಿಸುವುದು, ಈ ಕೂಡಲೇ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಕ್ರಮ ಕೈಗೊಳ್ಳುತ್ತೇವೆನ್ನುವ ಮಾತನ್ನು

ನಿರ್ದಿಷ್ಟವಾಗಿ ಹೇಳಿದ್ದಾರೆ, ಅದನ್ನು ಅವರು ಖಂಡಿತಾ ಮಾಡುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದನ್ನು ಇವತ್ತೇ ಪ್ರಸ್ತಾಪ ಮಾಡಿ ಈಗಿಂದೀಗಲೇ ಅಮಾನತ್ತಿನಲ್ಲಿಡಿ ಎಂದರೆ ನಾವು ಒಪ್ಪಿಕೊಳ್ಳುತ್ತೇವೆ. ಇದು ಒಂದು ವರ್ಷ ಎರಡು ತಿಂಗಳಿಂದ ನಡೆದಿದೆ, ನಾವು ಪದೇಪದೇ ಅವರ ಗಮನಕ್ಕೆ ತರುತ್ತಿದ್ದೇವೆ, ಇವತ್ತು ತಂದಿದ್ದೇವೆ. ನಾನು ಮೂರು ದಿವಸದ ಹಿಂದೆ ಬರೆದುಕೊಟ್ಟಿದ್ದೇನೆ, ಇವತ್ತಿನದಲ್ಲ ಅದು.

ಅಧ್ಯಕ್ಷರು: ಅಲ್ಲ, ಇದಕ್ಕೊಂದು ಕೊನೆ ಕಾಣಿಸಬೇಕಲ್ಲಾ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕೊನೆಕಾಣಿಸಬೇಕೆಂದರೆ ಸಸ್ಪೆಂಡ್ ಮಾಡುವುದಕ್ಕೆ ಹೇಳಿ.

ಶ್ರೀ ವಾಟಾಳ್ ನಾಗರಾಜ್: ಕೊನೆಗಾಣಿಸಬೇಕೆಂದರೆ ಒಂದೇ ಮಾರ್ಗ, ಮಾನ್ಯ ಸಚಿವರು ಅಮಾನತ್ತಿನಲ್ಲಿಡುತ್ತೇವೆಂದು ಹೇಳುವುದು ಈಗ ಉಳಿದಿರುವುದು, ಇದರ ಬಗ್ಗೆ ಸಮಗ್ರವಾದ ನ್ಯಾಯಾಂಗ ತನಿಖೆಯೂ ಕೂಡ ಆಗಬೇಕು.

ಅಧ್ಯಕ್ಷರು: ತಾವು ಹೇಳುವುದು ಸುಲಭ. ಆದರೆ ಆಡಳಿತ ನಡೆಸುವವರು ಆ ರೀತಿ ಹೇಳುವುದಕ್ಕಾಗುತ್ತದೆಯೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬೇರೆ ಯಾವುದಾಗಿದ್ದರೆ ಕೇಳುತ್ತಿರಲಿಲ್ಲ, It is a very serious matter. Your own COD has filed the charge-sheet and there is a lapse on the part of the regular police. Why you are hesitant to take action?

MR. SPEAKER: The Hon'ble Minister was clear. During discussions, few points have been made out by the Hon'ble Members. He said he will look into all those aspects and assured that he is going to take action.

SRI M.MALLIKARJUNA KHARGE: Let him take two days. You can give time.... ಇಲ್ಲದಿದ್ದರೆ ಮತ್ತೊಂದು ಕೊಲೆ ಆಗುತ್ತಲೇ ಇರುತ್ತದೆ.

MR. SPEAKER: I cannot fix the time for next murder or for him to take action. It is between two of you.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ರೀತಿಯ ವಾತಾವರಣ ನೋಡಿದರೆ, ಸರ್ಕಾರಕ್ಕೆ ಏನು ಅನ್ನಿಸುತ್ತದೆ? ಸರ್ಕಾರಕ್ಕೆ ಇನ್ನು ಮನವರಿಕೆಯಾಗಿಲ್ಲ, ಅಲ್ಲಿ ವಾತಾವರಣ ಸರಿ ಇದೆ ಎಂದು ಅನ್ನಿಸುತ್ತದೆಯೇ?

SRI M.P.PRAKASH: We fully subscribe the views expressed by the Leader of the Opposition. Please, kindly believe the Government also. We will certainly take action against them. ನಾವು, ಇಲ್ಲೆಲ್ಲಾ ಬಹಳ ಒಳ್ಳೆಯ ವಾತಾವರಣ ಸೃಷ್ಟಿಯಾಗಿದೆ ಎಂತಲೂ ಹೇಳುವುದಿಲ್ಲ ಅಥವಾ ಪೋಲೀಸರು, ಅಧಿಕಾರಿಗಳು ಮಾಡಿರುವ ತಪ್ಪುಗಳೂ ಕೂಡ ನನಗೆ ಮೇಲ್ನೋಟಕ್ಕೆ ಕಂಡುಬರುತ್ತಿದೆ, ತಾವೆಲ್ಲಾ ಹೊಸ ವಿಷಯಗಳನ್ನು ಚರ್ಚೆ ಮಾಡಿದ್ದೀರಿ; ನನಗೂ ಸ್ವಲ್ಪ ಸಮಯಕೊಟ್ಟ ತಕ್ಷಣ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ದುದು.

SRI M.MALLIKARJUNA KHARGE: Believing Government, one year we have kept quiet. After one year, I am telling you whatever statement made on 10-3-97, it has come true. ಹೀಗಾಗುತ್ತದೆ ನೋಡಿ ಎಚ್ಚರಿಕೆಯಿಂದಿರಿ ಎಂದು ಹೇಳಿದ್ದೆವು. ಅಧ್ಯಕ್ಷರೇ, ಅವರು ಎರಡು, ಮೂರು ದಿವಸಗಳಲ್ಲಿ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಪ್ರಾಮಾಣಿಕವಾಗಿ ಹೇಳಬೇಕು, ಆಗ ನಮಗೆ ಸಮಾಧಾನವಾಗುತ್ತದೆ ಇಲ್ಲದಿದ್ದರೆ ನಮಗೆ ಬೇರೆ ದಾರಿಯೇ ಇಲ್ಲ ನೀವು ಮನಸ್ಸಿಗೆ ಬೇಜಾರು ಮಾಡಿಕೊಂಡರೂ ಕೂಡ ನಾನು ಅಲ್ಲಿ ಕುಳಿತುಕೊಳ್ಳಬೇಕಾಗುತ್ತದೆ, ಅದು ಮಾಡುವುದು ಬೇಡವೆಂದು ನಾನು ಹೇಳಿದೆ, ನಾನು ನಿಮ್ಮ ಮನಸ್ಸನ್ನು ನೋಯಿಸುವುದಕ್ಕೆ ಹೇಳಲಿಲ್ಲ.

ಅಧ್ಯಕ್ಷರು: ಅವರು ಅತ್ಯಾಚಾರ ಮಾಡಿದರೆ ಇವರ್ಯಾಕೆ ಇಲ್ಲಿ ಬಿಳಿಪಂಚೆ ಕಟ್ಟಿಕೊಂಡು ಕುಳಿತುಕೊಳ್ಳಬೇಕು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಲ್ಲ, ಸರ್ಕಾರ ಜೀವಂತವಿದೆ, ಕಾನೂನು ಉಲ್ಲಂಘನೆ ಮಾಡಿದವರಿಗೆ ಉಗ್ರಶಿಕ್ಷೆಯಾಗುತ್ತದೆ, ಅಧಿಕಾರಿಗಳಿಗೆ ಶಿಕ್ಷೆ ಮಾಡುತ್ತಾರೆ, ಕಾನೂನು ಪ್ರಕಾರ ಪೋಲೀಸರು ವರ್ತಿಸದಿದ್ದರೆ ಕಾನೂನಿನ ಪ್ರಕಾರ ಅವರಿಗೂ ಶಿಕ್ಷೆಯಾಗುತ್ತದೆ ಎಂದು ಸಮಾಜಕ್ಕೆ ಸಂದೇಶ ಹೋಗಬೇಕಲ್ಲಾ.

ಅಧ್ಯಕ್ಷರು: ಇಲ್ಲಿ ಕುಳಿತುಕೊಳ್ಳುವುದು ಬೇಡ, ಬೇರೆ ಏನಾದರೂ ಯೋಚನೆ ಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಲ್ಲ, ಅಲ್ಲಿ ಬಹಳ ಗಂಭೀರವಾದಂಥ ಸಮಸ್ಯೆ ಇದೆ. ಅವರು ಹೇಳುವುದೇ ಇಲ್ಲವೆಂದರೆ ನಾನು ಅನಿವಾರ್ಯವಾಗಿ ಅಲ್ಲಿ ಕುಳಿತು ಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು: ನಾನು ಸಮಸ್ಯೆ ಗಂಭೀರವಲ್ಲ ಎಂದು ಹೇಳುತ್ತಿಲ್ಲ, ಇಲ್ಲಿ ಬರುವುದು ಬೇಡ, ಬೇರೆ ಏನಾದರೂ ಯೋಚನೆ ಮಾಡಿ ಎಂದು ಹೇಳಿದ್ದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ಸದನವನ್ನು ಮುಂದುವರೆಸಿ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಅವರೇ ಅನ್ಯಾಯ ನಡೆದಿದೆ ಎಂದು ಹೇಳಿ ಒಪ್ಪಿಕೊಳ್ಳುತ್ತಿದ್ದಾರೆ. ಶ್ರೀ ಎಂ.ಪಿ.ಪ್ರಕಾಶ್‌ರವರು ಸರ್ಕಾರ ತಲೆತಗ್ಗಿಸಬೇಕೆಂದು ಹೇಳಿದ್ದಾರೆ. ಇಂಥದ್ದರಲ್ಲಿ ಹಿಂದೆಮುಂದೆ ನೋಡುವುದೇನಿದೆ, ನಾವು ಬೆಂಬಲ ಕೊಡುತ್ತೇವೆ, ಇದು ಸರಿಯಲ್ಲ. ನಾವು ಇದರಲ್ಲಿ ಯಾರ ಬಗ್ಗೆ ರಾಜಕೀಯ ಮಾಡುತ್ತಿಲ್ಲ, ಈ ಅನ್ಯಾಯ ತಪ್ಪಬೇಕು. ಈ ಪೋಲೀಸರಿಂದ ನಡೆದಿರುವ ಅವಿವೇಕತನ ನಿಲ್ಲಬೇಕೆನ್ನುವುದಾಗಿದೆ.

(ಈ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರು, ಕಾಂಗ್ರೆಸ್ ಸದಸ್ಯರು ಹಾಗೂ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಸದನದ ಬಾವಿಗೆ ಬಂದು ಧರಣಿ ನಿಂತರು)

ಶ್ರೀ ಆರ್.ರೋಷನ್‌ಬೇಗ್: ಅಧ್ಯಕ್ಷರೆ, ನಾವೇನು ಕ್ರಮ ತೆಗೆದುಕೊಳ್ಳುತ್ತೇವೆಂದು, we will take action within a week. I have been very frank. It is not good on his part to speak like that..

(ಗೊಂದಲ)

I have been very fair..

MR. SPEAKER: Whatever they speak from the well or the House will not go on record..

ಶ್ರೀ ಎಂ.ಪಿ.ಪ್ರಕಾಶ್: ಸರ್ಕಾರದ ಪರವಾಗಿ ವಿರೋಧಪಕ್ಷದ ಮಾನ್ಯ ಎಲ್ಲಾ ನಾಯಕರು ಮತ್ತು ಶಾಸಕರನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಈಗಾಗಲೇ ಗೃಹಸಚಿವರು, ಒಂದು ವಾರದ ಕಾಲಾವಕಾಶ ಕೊಡಿ ಅದನ್ನು ಸಂಪೂರ್ಣವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿರುವುದರಿಂದ ದಯವಿಟ್ಟು ತಾವು ತಮ್ಮ ಸ್ಥಾನಗಳಿಗೆ ಹಿಂತಿರುಗಿ, ಸಹಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮೂರು ಅಥವಾ ನಾಲ್ಕು ದಿವಸಗಳ ಸಮಯವನ್ನು ತೆಗೆದುಕೊಳ್ಳಿ ಎಂದು ಹೇಳಿದ್ದೀರಿ. ಒಂದು ವಾರದ ಸಮಯದಲ್ಲಿ ಅದನ್ನು ನೋಡಿ ಕ್ರಮ ಕೈಗೊಳ್ಳುತ್ತಾರೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ವಿರೋಧಪಕ್ಷದವರು ಈ ಹಂತಕ್ಕೆ ತೆಗೆದುಕೊಂಡು ಬಂದ ಮೇಲೆ, ನಾನು ಒಂದು ವಾರದಲ್ಲಿ ಕ್ರಮ ತೆಗೆದುಕೊಂಡು ತಿಳಿಸುತ್ತೇವೆಂದು ಒಂದು ಮಾತನ್ನು ಹೇಳುತ್ತೇನೆ ಎಂದು ಹೇಳಿದರು, ನನ್ನ ಪ್ರಕಾರ ಇದು ಸಾಕು, ದಯವಿಟ್ಟು ವಿರೋಧಪಕ್ಷದ ನಾಯಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ತಮ್ಮ ಸ್ಥಾನಗಳಿಗೆ ಹಿಂತುರುಗಿ.

ಶ್ರೀ ಎಂ.ಪಿ.ಪ್ರಕಾಶ್: ನೀವೂ ಕೂಡ ಸರ್ಕಾರ ನಡೆಸಿದ್ದೀರಿ, ಸರ್ಕಾರ ನಡೆಸದಿರುವವರು ಈ ವಿಷಯ ಪ್ರಸ್ತಾಪ ಮಾಡಿದರೆ ಸರಿ. ಒಂದು ವಾರದ ಅವಧಿಯನ್ನು ಕೇಳುತ್ತಿದ್ದೇವೆ. ಮೂರು, ನಾಲ್ಕು ದಿವಸ ಸಮಯ ತೆಗೆದುಕೊಳ್ಳಿ ಎಂದು ತಾವು ಹೇಳಿದಿರಿ, ಒಂದು ವಾರದಲ್ಲಿ ನಾನು ನಿರ್ಣಯ ಮಾಡುತ್ತೇನೆಂದು ಗೃಹಸಚಿವರು ಹೇಳಿದ್ದಾರೆ, ದಯಮಾಡಿ ನಾನು ಸರ್ಕಾರದ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ ತಮ್ಮ ಸ್ಥಾನಕ್ಕೆ ಹಿಂದಿರುಗಿ.

ಅಧ್ಯಕ್ಷರು: ನಾನು ಏನು ಹೇಳುತ್ತೇನೆಂದರೆ, ಅವರು ಒಂದು ವಾರದಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರು, I think fair enough. Through the Leader of Opposition, I appeal to you to kindly return to your seats.. ತಪ್ಪಿತಸ್ಥರ ಮೇಲೆ ಕ್ರಮ ಅಂದರೆ ತಲೆ ಮೇಲೇನಾದರೂ ಕಿರೀಟ ಇಡುತ್ತಾರೆಯೇ? ದಯವಿಟ್ಟು ತಮ್ಮ ಆಸನಗಳಿಗೆ ಹಿಂತಿರುಗಿ. It is fair.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಈ ರೀತಿ ಕೊಲೆ ನಡೆಯುತ್ತಿರುವುದು ಇಡೀ ರಾಜ್ಯದಲ್ಲಿ ಹರಡುತ್ತಾ ಹೋದರೆ ಈ ಸರ್ಕಾರಕ್ಕೆ ಇನ್ನು ಅವಮಾನವಾಗುತ್ತದೆ. ಮಾಡಬಾರದ ಕೆಲಸಗಳು ನಡೆಯುತ್ತಿವೆ, ಆ ವೆಂಕಟೇಶನ ಕೊಲೆಯಾಯಿತು, ಕರಿಯಣ್ಣನ ಕೊಲೆ ನಡೆಯುತ್ತಿದೆ. ಈ ರೀತಿ ಕೊಲೆ ಮಾಡಿದವರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತಿಲ್ಲವೆನ್ನುವ ಸ್ಥಿತಿಯಿಂದ ಜನರು ಈ ಸರ್ಕಾರದ ವಿರುದ್ಧ ದಂಗೆ ಏಳುವ ಸ್ಥಿತಿ ಬಂದರೂ ಆಶ್ಚರ್ಯವಿಲ್ಲ. ಏಕೆಂದರೆ ಮೂರು ದಿವಸಗಳ ಮುಂಚೆಯೇ ವಿರೊಧಪಕ್ಷದ ನಾಯಕರು ಈ ವಿಷಯವನ್ನು ಕೊಟ್ಟಿದ್ದೇನೆಂದು ಹೇಳಿದ್ದಾರೆ. ಈ ಘಟನೆ ಒಂದು ವರ್ಷಕ್ಕೆ ಮುಂಚೆ ನಡೆದಿರುವುದು. ಮಂತ್ರಿಗಳು ಅನೇಕರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂಬುದನ್ನು ಒಪ್ಪುತ್ತಿದ್ದಾರೆ, ನನಗನ್ನಿಸುತ್ತದೆ, ಮತ್ತೆ ಇದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶಕೊಡಬಾರದಿತ್ತು. ಈಗಲೂ ಕೂಡ ತಪ್ಪಿತಸ್ಥರ ಮೇಲೆ ಇಂತ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದರೆ ತಪ್ಪೇನೂ ಇಲ್ಲ.

ಅಧ್ಯಕ್ಷರು: ಮುಂದೆ ನಿಮಗೆ ಅದರ ಕಷ್ಟ ಗೊತ್ತಾಗುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ: ಅವರೇ ಪೋಲೀಸ್ ಇಲಾಖೆಯ ವತಿಯಿಂದ ಅನ್ಯಾಯ ತ್ಯಾಚಾರ ನಡೆದಿರುವುದು ನಿಜವೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ತಪ್ಪಿತಸ್ಥರ ವಿರುದ್ಧ ಒಂದು ವಾರದಲ್ಲಿ ಕ್ರಮ ಕೈಗೊಳ್ಳುತ್ತೇವೆಂದು ಕೇಳಿದ್ದಾರೆ. ಅದು ಸಾಕು.

ಶ್ರೀ ಕೆ.ಎಸ್.ಈಶ್ವರಪ್ಪ: ಇವರೇನಾದರೂ ತಪ್ಪಿತಸ್ಥರನ್ನು ಸಸ್ಪೆಂಡ್ ಮಾಡಿದರೆ ಎನ್‌ಕ್ವೈರಿಗೆ ನಿಜಕ್ಕೂ ಅನುಕೂಲವಾಗುತ್ತದೆ.

ಅಧ್ಯಕ್ಷರು: ನಾನು ನಿಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ಇಂಥ ಪದವನ್ನೇ ಬಳಸಬೇಕು, ಹೀಗೆ ಹೇಳಬೇಕೆಂದು ಹೇಳಿದರೆ ಸಾರ್ವಜನಿಕರಿಗೆ ನಮ್ಮ ಪ್ರಭುದ್ಧತೆಯ ಬಗ್ಗೆ ಬೇರೆ ರೀತಿಯ ಅಭಿಪ್ರಾಯ ಬರುತ್ತದೆ. ದಯಮಾಡಿ ಸಹಕರಿಸಿ. ಸವಾಬ್ದಾರಿ ಸ್ಥಾನದಲ್ಲಿರುವ ಒಬ್ಬ ಮಂತ್ರಿಗಳು ಸರ್ಕಾರದ ಪರವಾಗಿ ಒಂದು ವಾರದೊಳಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ: ಈ ಸರ್ಕಾರ ಈ ಸ್ಥಿತಿಯವರೆಗೆ ಇದನ್ನು ತರಬಾರದಿತ್ತು ಎಂದು ನಾನು ಹೇಳಿದ್ದು. ಹೊಸಕೋಟೆಯಲ್ಲಿ ಆ ಕೊಲೆ, ಈ ಕೊಲೆ ಎಂದು ಕೊಲೆಗಳ ಪರಮಾಲೆಯೇ ನಡೆದುಹೋಗುತ್ತದೆ. ಈ ರೀತಿ ಕೊಲೆ ನಡೆದಾಗ ಸರ್ಕಾರ ಸುಮ್ಮನೆ ಇದ್ದರೆ, ಬೇರೆ ತಾಲ್ಲೂಕಿನಲ್ಲೂ ಕೂಡ ಇದಾಗುತ್ತದೆ ಅಲ್ಲವೇ? ಇಂತಹ ಕ್ರಮ ತೆಗೆದುಕೊಳ್ಳುತ್ತೇವೆಂದು ಬಹಳ ಬೇಗ ಹೇಳಿದರೆ ತಪ್ಪೇನಿದೆ?

ಶ್ರೀ ಎಂ.ಪಿ.ಪ್ರಕಾಶ್: ಇಂಥದ್ದೇ ರೀತಿಯಲ್ಲಿ ಉತ್ತರವನ್ನು ನಿರೀಕ್ಷೆ ಮಾಡುವುದು ಸರಿಯಲ್ಲ.

MR. SPEAKER: I am convinced about the reply.

ಶ್ರೀ ಎಂ.ಪಿ.ಪ್ರಕಾಶ್: ಆದುದರಿಂದ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ತಪ್ಪಿತಸ್ಥರ ಮೇಲೆ ಸರ್ಕಾರ ಒಂದು ವಾರದೊಳಗೆ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳುವುದಕ್ಕಿಂತ ಮತ್ತೇನು ಹೇಳುವುದಕ್ಕೆ ಸಾಧ್ಯವಿದೆ?

(ಶ್ರೀ ವೀರಪ್ಪ ಮೊಯ್ಲಿಯವರು ತಮ್ಮ ಆಸನಕ್ಕೆ ಹಿಂತಿರುಗಿದರು)

+ ಶ್ರೀ ಎಂ.ವೀರಪ್ಪಮೊಯ್ಲಿ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ವಿರೋಧ ಪಕ್ಷದವರಾಗಲಿ, ನಾವಾಗಲಿ ಒಂದು ಕಡೆ ಇಂಥ ಕ್ರಿಮಿನಲ್ ಘಟನೆಯಾದರೆ, ಕೊಲೆಯಾದರೆ ಇಲ್ಲಿ ವಿಚಾರ ಎತ್ತತಕ್ಕಂಥ ಪ್ರಶ್ನೆ ಬರುವುದಿಲ್ಲ. ಯಾಕೆಂದರೆ, ಪೋಲೀಸರು ನಿರ್ಭೀತಿಯಿಂದ ಯಾವುದೇ ಒತ್ತಡವಿಲ್ಲದೆ ತನಿಖೆ ಮಾಡಿಸತಕ್ಕಂಥ ಒಂದು ಅವಕಾಶ ಕೊಡಬೇಕು. ಈಗ ಮಾನ್ಯ ಸಚಿವರಾದ

ಎಂ.ಪಿ.ಪ್ರಕಾಶ್‌ರವರು ಹೇಳಿದ ಪ್ರಕಾರ, ಹೀಗೆ ಮಾಡಬೇಕು, ಇಂಥ ಶಬ್ಧವನ್ನೇ ಬಳಸಬೇಕೆಂದು ನಾವು ನಿರೀಕ್ಷೆ ಮಾಡುವುದಿಲ್ಲ, ಏಕೆಂದರೆ, ನಾವೂ ಕೂಡ ಆಡಳಿತ ಮಾಡಿದ್ದೇವೆ. ಆದರೆ ಇದು ಈ ಶಬ್ಧಗಳ ಚೌಕಟ್ಟಿನಲ್ಲಿ ಮಾತನಾಡತಕ್ಕಂಥ ವಿಚಾರವಲ್ಲ. ತಾವು ದಯಮಾಡಿ ತಿಳಿದುಕೊಳ್ಳಬೇಕಾಗಿರುವುದೇನೆಂದರೆ, ಇದರಲ್ಲಿ ಒಂದು ವರ್ಷದಿಂದ ಸರಣಿ ಘಟನೆಗಳು ನಡೆಯುತ್ತಿವೆ.

5.20 ಪಿ.ಎಂ.

ಹೆಣ್ಣುಮಕ್ಕಳ ಮೇಲೆ ಅತ್ಯಾಚಾರವಾಗಿದೆ. ನಾವು ತಿಳಿದುಕೊಂಡ ಪ್ರಕಾರ ಒಬ್ಬ ಅಧಿಕಾರಿಯ ನಿರ್ಲಕ್ಷ್ಯದಿಂದ ಅಥವಾ ಯಾವುದೇ ಕೇಸ್ ಬಗ್ಗೆ ಸರಿಯಾದಂತಹ ರೀತಿಯಲ್ಲಿ, ಕಾನೂನಿನ ತಹಬದಿಯಲ್ಲಿಡದೇ ಇರುವ ಅಧಿಕಾರಿಗಳು ಅಲ್ಲೇ ಇದ್ದಾರೆ. ಇವರು ಬದಲಾವಣೆಯಾಗದೇ ಇರುವಂಥಾದ್ದು, ಮತ್ತು ಇವರು ನಿರ್ಲಕ್ಷ್ಯದಿಂದ ಅಕ್ಷಮ್ಯ ಅಪರಾಧವನ್ನು ಮಾಡಿದ್ದಾರೆ. ಇಲ್ಲಿ ಕಾನೂನು ಅನ್ನು ಕೈಗೆ ತೆಗೆದುಕೊಂಡು ಅಕ್ಷಮ್ಯ ಅಪರಾಧವನ್ನು ಮಾಡಿದ್ದಾರೆ. ಈ ರೀತಿಯಾಗಿ ಅಕ್ರಮ, ಅತ್ಯಾಚಾರಗಳು ಆಗುವುದಕ್ಕೆ ಬಿಟ್ಟರೆ ಮಾನ್ಯ ಬಿಜೆಪಿ ನಾಯಕರಾದ ಕೆ.ಎಸ್.ಈಶ್ವರಪ್ಪನವರು ಹೇಳಿದ ಹಾಗೆ ಅದು ರಾಂಗ್ ಸಿಗ್ನಲ್ ಆಗುತ್ತದೆ. ಆದುದರಿಂದ ಇವತ್ತು ಬರೀ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದರೆ ಈ ರೀತಿಯಾಗಿ ವೇಗವಾಗಿ ಸಾಧ್ಯವಾಗುವುದಿಲ್ಲ. ತಾವು ಇದುವರೆಗೂ ಏನು ಮಾಡಿದ್ದೀರಿ? ಈ ವಿಷಯವಾಗಿ ಇಲ್ಲಿ ನಾವು ಧರಣಿ ಕುಳಿತುಕೊಳ್ಳುವಂತಹ ಅವಶ್ಯಕತೆ ಇರಲಿಲ್ಲ. ಇಲ್ಲಿ ಯಾರನ್ನೂ ಶೀಲ್ಡ್ ಮಾಡುವಂತಹ ಅವಶ್ಯಕತೆ ಇಲ್ಲ. ಇದನ್ನು ಈ ರೀತಿಯಾಗಿಯೇ ಬಿಟ್ಟರೆ ಇದು ಸಡಿಲವಾಗುತ್ತದೆ. ನಾವು ಸಹ ಗೃಹ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿದ್ದೇವೆ, ಬೇರೆ ಬೇರೆ ರೀತಿಯಲ್ಲಿ ಕೆಲಸ ಮಾಡಿದ್ದೇವೆ. ಒಂದು ಸಲ ಕುಷ್ಟಗಿಯಲ್ಲಿ ನಡೆದಂತಹ ಘಟನೆ, ಆಗ ಮಾನ್ಯ ಉಪಮುಖ್ಯಮಂತ್ರಿಗಳಾಗಿ ಶ್ರೀ ಎಸ್.ಎಂ.ಕೃಷ್ಣರವರು ಇದ್ದರು. ಅವರು ಕುಷ್ಟಗಿಯಲ್ಲಿ ಅತ್ಯಾಚಾರವಾದಂತಹ ಸಂದರ್ಭದಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್‌ರವರನ್ನು ಕೂಡಲೇ ಸಸ್ಪೆಂಡ್ ಮಾಡಿದರು. ಆದರೆ ನಿಜವಾಗಿಯೂ ಅವರನ್ನು ಸಸ್ಪೆಂಡ್ ಮಾಡುವಂತಹ ಕಾರಣವೇ ಇರಲಿಲ್ಲ. ಅಲ್ಲಿ ನಡೆದಂತಹ ವಿಷಯವೇ ಬೇರೆಯಾಗಿತ್ತು. ಆ ಇನ್‌ಸ್ಪೆಕ್ಟರ್ ಅನ್ನು ಸಸ್ಪೆಂಡ್ ಮಾಡಿದರೂ ಕೂಡ ನಂತರ ಅವರು ನಿರಪರಾಧಿ ಎಂದು ಕಂಡುಬಂದರೆ ನಂತರ ಅವರ ಅಮಾನತ್ತನ್ನು ರದ್ದು ಮಾಡಬಹುದು. ಆ ರೀತಿಯಾಗಿ ಸೆನ್ಸಿಟೀವ್ ಪ್ರಾಬ್ಲಂ ಆಗುತ್ತದೆ. ಆದರೆ ಯಾವುದೇ ಒಂದು ಸೂಕ್ಷ್ಮತೆಯ ಅರಿವು ಇಲ್ಲದೇ ತಾವು ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದಿರಿ. ಈಗ ಒಂದು ವರ್ಷವಾಯಿತು ಸರಣಿ ಮರ್ಡರ್ ಆಯಿತು ಈಗ ಮತ್ತೆ ಭೀಕರವಾಗಿ ಇನ್ನೊಂದು ಮರ್ಡರ್ ಆಯಿತು. ಆದುದರಿಂದ ನಾವು ಹೇಳುವುದೇನೆಂದರೆ ಇದು ಒಂದು ಪೊಲಿಟಿಕಲ್ ಇಷ್ಯೂ ನಮಗೆ ಬಂದಿದ್ದೆ. ಅದಕ್ಕೆ ನಾವು ಇಲ್ಲಿ ಮಾತನಾಡುತ್ತಿದ್ದೇವೆ. ದಯಮಾಡಿ ತಾವು ಇದರಲ್ಲಿ ಪ್ರತಿಷ್ಠೆಯ

ರೀತಿಯಲ್ಲಿ ಮಾತನಾಡಬೇಡಿ. ತಾವು ಇದಕ್ಕೆ ಒಪ್ಪಿಕೊಂಡರೆ ನಮ್ಮ ಪ್ರತಿಷ್ಠೆಗೆ ತೊಂದರೆಯಾಗುತ್ತದೆಂದರೆ ಸರಿಯಾಗುವುದಿಲ್ಲ. ನಾವು ಇದನ್ನು ಗಂಭೀರವಾದ ವಿಷಯವೆಂದು ಹೇಳುತ್ತಿದ್ದೇವೆ. ಇಲ್ಲಿ ನಾನು ಇದನ್ನು ಬಹಳ ಸಮಯದಿಂದಲೂ ನೋಡುತ್ತಿದ್ದೇನೆ. ನೀವು ಇದನ್ನು ಎಷ್ಟು ಸಹಿಸಿಕೊಳ್ಳುತ್ತೀರಿ, ಇದರಿಂದ ನಿಮಗೆ ಒಳ್ಳೆಯ ಹೆಸರು ತರುವುದಿಲ್ಲ. It is a very bad reflection on your law and order maintenance. ಆದುದರಿಂದ ಮಾನ್ಯ ಪ್ರಕಾಶ್‌ರವರೇ, ಇದರಲ್ಲಿ ಯಾವುದೇ ಪ್ರತಿಷ್ಠೆಯು ಇಲ್ಲ. ನೀವು ಪೊಲಿಟಿಕಲ್ ಇಷ್ಯೂ ತೆಗೆದುಕೊಳ್ಳುವಂಥಾದ್ದು ಪ್ರಶ್ನೆಯಲ್ಲ. ಇದನ್ನು ಯಾರಾದರೂ ತೆಗೆದುಕೊಳ್ಳುವಂತಹ ವಿಚಾರವಾಗಿದೆ. ಇದು ಒಂದು ರಾಜಕೀಯ ಪಕ್ಷ ತೆಗೆದುಕೊಳ್ಳುವಂತಹ ವಿಚಾರವಲ್ಲ. ತಾವೇ ಇದರ ಬಗ್ಗೆ ವಿಮರ್ಶೆ ಮಾಡಬೇಕಾಗಿತ್ತು. ಇದನ್ನು ವಿಮರ್ಶೆ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕಾಗಿತ್ತು. ಇಲ್ಲದಿದ್ದರೆ ಕನಿಷ್ಠ ಪಕ್ಷ ಅಮಾನತ್ತಿನಲ್ಲಿಡಬೇಕಾಗಿತ್ತು. ಇದು ಏನೂ ಹೊಸ ಪರಂಪರೆಯಲ್ಲ. ಇಲ್ಲಿ ವಿಷಯ ಪ್ರಸ್ತಾಪವಾದ ಕೂಡಲೇ ಅಮಾನತ್ತಿನಲ್ಲಿಡುವಂಥಾದ್ದು ಹೊಸ ವಿಚಾರವೇನಲ್ಲಾ. In the case of Koppa incident, on the spot ಅಂತಹ ಕೆಲಸವಾಗಿದೆ, ನಾವು ಅಮಾನತ್ತು ಮಾಡಿದ್ದೇವೆ. It is a sensitive problem. It is a very bad reflection on your law and order maintenance. It is not unprecedented. You can keep whoever responsible under suspension and that will enhance your prestige and political will to maintain law and order problem. ಆದುದರಿಂದ ಇವರು ಸುಮ್ಮನೆ ವಿಷಯವನ್ನು ಪ್ರಸ್ತಾಪ ಮಾಡಿದರು, ಧರಣಿ ಕುಳಿತುಕೊಂಡರು, ನೀವು ಉತ್ತರ ಕೊಟ್ಟು ಇಲ್ಲಿಗೆ ಇದು ಪರಿಹಾರವಾಗುವುದಾದರೆ ಲಾ ಅಂಡ್ ಆರ್ಡರ್ ಸೆಟಲ್ ಪ್ರಶ್ನೆ ಆಗುವುದಾದರೆ ಮಾಡಿಬಿಡಿ. ಆದರೆ ಇದು ಸಾಲ್ವ್ ಆಗುತ್ತಾ ಇಲ್ಲ. ಇದು ದಿನದಿಂದ ದಿನಕ್ಕೆ ಪರಿಸ್ಥಿತಿ ಪರಿಸ್ಥಿತಿ ಉಲ್ಬಣವಾಗುತ್ತಿದೆ. ಇದರಲ್ಲಿ ಯಾರಿಗೂ ಪಶ್ಚಾತ್ತಾಪದ ಭಾವನೆ ಇಲ್ಲ. ಇಲ್ಲಿ ಸ್ಥಾನಮಾನಗಳನ್ನು ಕೈಯಲ್ಲಿಟ್ಟುಕೊಂಡು ಏನು ಬೇಕಾದರೂ ಮಾಡಬಹುದೆಂದು ಫ್ರೀ ಲೈಸನ್ಸ್ ಅನ್ನು ಸರ್ಕಾರವೇ ಕೊಟ್ಟಹಾಗೆ ನಿಮಗೆ ಆಪಾದನೆ ಬರುತ್ತದೆ. How can that be a license for all these officers because everybody will take law into their own hands. ಇದು ನಡೆಯುವುದಿಲ್ಲ. ಆದುದರಿಂದ ಇದರ ಬಗ್ಗೆ ತಕ್ಷಣ ವಿಚಾರ ಮಾಡಿ ಅನೌನ್ಸ್ ಮಾಡಬೇಕು. whoever is responsible, if the Circle Inspector is responsible, keep him under suspension. If the S.P., is responsible, keep him under suspension. Don't hesitate. This will enhance your prestige. ಈ ರೀತಿ ಮಾಡಿದರೆ ಇವರು

ಜಾಗೃತರಾಗುತ್ತಾರೆ. ಆಗ ಇವರಿಗೆ ಇನ್ನು ಮುಂದೆ ನನ್ನ ಆಡಳಿತದಲ್ಲಿ ಈ ರೀತಿಯಾಗಬಾರದೆಂದು ಉಳಿದ ಪೋಲೀಸ್ ಆಫೀಸರ್ಸ್‌ಗಳು ಜಾಗೃತರಾಗುತ್ತಾರೆ. They will take precaution. ಆದುದರಿಂದ ಇದನ್ನು ಸಡಿಲವಾಗಿ ತೆಗೆದುಕೊಳ್ಳಬೇಕು, ಈ ವಿಷಯದಲ್ಲಿ ಪ್ರೆಸ್ಟೀಜ್ ಬೇಡ, ನಮಗೂ ಕೂಡ ಇದರಲ್ಲಿ ಪ್ರೆಸ್ಟೀಜ್ ಬೇಕಾಗಿಲ್ಲ. ಇಲ್ಲಿ ಮಾತನಾಡುವಂತಹ ಅವಶ್ಯಕತೆ ಇಲ್ಲ. ಆದರೆ ಇಂತಹ ಭಾಷೆ ಮಾತನಾಡಿ ಎನ್ನುವುದು ಬೇಡ, ಇದರಲ್ಲಿ ಭಾಷೆ ಬಳಕೆ ಬೇಡ, ನಿಮ್ಮ ಕಾರ್ಯಾಚರಣೆಯಾಗಲಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ರೋಷನ್‌ಬೇಗ್ (ಗೃಹಸಚಿವರು): ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದಂತಹ ಮಾನ್ಯ ವೀರಪ್ಪಮೊಯಿಲಿಯವರು ಹೇಳಿದ್ದನ್ನು ಕೇಳಿದ್ದೇನೆ. ನಾನು ಅವರ ಮಾತನ್ನು ಪೂರ್ತಿಯಾಗಿ ಒಪ್ಪುತ್ತೇನೆ. ಅದರ ಬಗ್ಗೆ ಸರ್ಕಾರದ ಪ್ರೆಸ್ಟೀಜ್ ಪ್ರಶ್ನೆ ಏನೂ ಇಲ್ಲ. ಇಲ್ಲಿ ಯಾರ ಪ್ರೆಸ್ಟೀಜ್ ಹೋಗುತ್ತದೆನ್ನುವಂಥಾದ್ದು ಏನೂ ಇಲ್ಲ. ಅಲ್ಲಿ ಅತ್ಯಾಚಾರ ನಡೆದಿರುವಂಥಾದ್ದು ನಿಜವಾಗಿದೆ. ಇಲ್ಲಿ ಯಾರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳಬೇಕೋ ಅವರನ್ನು ಅರೆಸ್ಟ್ ಮಾಡಿದ್ದಾರೆ. ಎಲ್ಲಿ ಪೋಲೀಸ್‌ನವರು ಲ್ಯಾಪ್ಸ್ ಮಾಡಿದ್ದಾರೆ. ಅವರೆ ಮೇಲೆ ಆ್ಯಕ್ಷನ್ ತೆಗೆದುಕೊಳ್ಳಬೇಕೆಂಬ ಬಗ್ಗೆ I have sought for one week's time to take action. I think that is fair enough. ಇದರ ಬಗ್ಗೆ ಒಂದು ವಾರ ಕಾಲಾವಕಾಶವನ್ನು ತೆಗೆದುಕೊಳ್ಳೋಣ. ಇದರಲ್ಲಿ ಸರ್ಕಾರದ ಪ್ರೆಸ್ಟೀಜ್ ಎನ್ನುವ ಪ್ರಶ್ನೆ ಇಲ್ಲ. ಒಂದು ವಾರ ಟೈಮ್ ಕೊಡಿ. ಯಾರ್ಯಾರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳಬೇಕೆಂಬ ಬಗ್ಗೆ ಕಾಲಾವಕಾಶವನ್ನು ಕೊಡಿ ಎಂದು ಕೇಳುತ್ತೇನೆ. Give me some time.

ಅಧ್ಯಕ್ಷರು: ಆಯಿತು, ಈ ವಿಷಯವನ್ನು ಮುಕ್ತಾಯಗೊಳಿಸೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅವರು ಎಂಟು ದಿವಸಗಳಲ್ಲಿ ಯಾರು ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳು ಇದ್ದಾರೆ. ಅವರ ಮೇಲೆ ನಾನು ಕ್ರಮ ಜರುಗಿಸುತ್ತೇನೆಂಬ ಮಾತನ್ನು ಹೇಳಿದ್ದಾರೆ. With this assurance, under your guidance, we take it that the Government will seriously take note of this and take action. ಎಂದು ನಾನು ಭಾವಿಸುತ್ತೇನೆ.

MR. SPEAKER: I am a most-privileged man in this House. Said to be an, abetter for all these things.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಒಂದೊಂದು ಸಾರಿ ಏನಾಗುತ್ತದೆಂದರೆ ಕೆಲವು ರಾಜಕೀಯ ಒತ್ತಡಗಳನ್ನು ತರುತ್ತಾರೆ. ಆಗ ಅವರಿಗೆ

ನಾಗುತ್ತದೆಂದರೆ ನೀವು ಹಾಗೆ ಮಾಡಬಾರದಾಗಿತ್ತು, ಹೀಗೆ ಮಾಡಬಾರದಾಗಿತ್ತು ಎಂದು ಈ ರೀತಿಯಾಗಿ ಮಾತುಗಳು ಬರುತ್ತಾ ಇರುತ್ತವೆ. ಆದುದರಿಂದ ಇಲ್ಲಿ ಮುಂದಿನ ಸಾಲಿನಲ್ಲಿ ಕುಳಿತುಕೊಂಡಿರುವವರು ಧೈರ್ಯ ತುಂಬಬೇಕು, ತಾವೂ ಸಹ ಅವರಿಗೆ ಆಶೀರ್ವಾದವನ್ನು ಮಾಡಬೇಕು.

6) ವಿತ್ತೀಯ ಕಾರ್ಯಕಲಾಪ

1998-99ನೇ ಸಾಲಿನ ಬೇಡಿಕೆ ಮೇಲಿನ ಚರ್ಚೆ: (ಬೇಡಿಕೆ ಸಂಖ್ಯೆ 54-55)

+ ಶ್ರೀ ವಸಂತ ವಿ. ಸಾಲಿಯಾನ (ಕಾಪು): ಮಾನ್ಯ ಅಧ್ಯಕ್ಷರೆ, 1998-99ನೇ ಸಾಲಿನ ಬೇಡಿಕೆಯ ಸಂಖ್ಯೆ : 54-55ರ ಬಗ್ಗೆ ತಮ್ಮ ಮುಖೇನ ಸರ್ಕಾರಕ್ಕೆ ಕೆಲವು ಸಲಹೆ ಸೂಚನೆಗಳನ್ನು ಕೊಡಲಿಚ್ಚಿಸುತ್ತೇನೆ. ರಾಜ್ಯದಲ್ಲಿ ಬಡತನ ರೇಖೆಯಿಂದ ಕೆಳಗಿದ್ದು, ಕಡಿಮೆ ಆದಾಯವಿರುವ ಅವರು ಅತೀ ಬಡವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮತ್ತು ಹಿಂದುಳಿದ ವರ್ಗದವರಿಗೆ ಅಲ್ಪಸಂಖ್ಯಾತರಿಗೆ ಸೇರಿದ ಅನೇಕ ಪಂಗಡದವರಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಯೋಜನೆಗಳನ್ನು ಹಾಕಿಕೊಂಡಿದೆ. ಅವರ ಆರ್ಥಿಕ ಅಭಿವೃದ್ಧಿಗಾಗಿ ಈ ಜಿಲ್ಲಾ ಪಂಚಾಯತ್ ರಾಜ್ಯ ವ್ಯವಸ್ಥೆ ಇದೆ. ಆದರೆ ಈ ಎಲ್ಲಾ ಯೋಜನೆಗಳನ್ನು ನಿರ್ದಿಷ್ಟವಾಗಿ, ನಿಗದಿತ ಗುರಿಯನ್ನು ಸಾಧಿಸಲು ಈ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಸಾಮನಿ)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮುಖ್ಯವಾಗಿ ಪಂಚಾಯತ್ ರಾಜ್ ಮಸೂದೆ ಜಾರಿಗೆ ಬಂದನಂತರ ಸುಮಾರು ಈ ರಾಜ್ಯದಲ್ಲಿ 5,640 ಗ್ರಾಮ ಪಂಚಾಯತ್‌ಗಳು ಅಸ್ತಿತ್ವಕ್ಕೆ ಬಂದಿದೆ. ನಾವು ಮುಖ್ಯವಾಗಿ ಗ್ರಾಮ ಪಂಚಾಯತ್ ವಿಷಯವಾಗಿ ಮಾತನಾಡಲು ಹೋದಾಗ ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳು ಯಾವ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಂಡು ಹೋಗುತ್ತಾರೆ. ಗ್ರಾಮ ಪಂಚಾಯತ್‌ನವರಿಗೆ ಯಾವ ರೀತಿಯ ಆದಾಯವಿದೆ ಮತ್ತು ಗ್ರಾಮ ಪಂಚಾಯತ್‌ಗೆ ರಾಜ್ಯದಿಂದ, ಜಿಲ್ಲಾ ಪಂಚಾಯತ್‌ನಿಂದ ಯಾವ ರೀತಿಯಾಗಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅನುಷ್ಠಾನ ಮಾಡುವುದಕ್ಕೆ ಹಣವನ್ನು ಎಷ್ಟೆಷ್ಟು ಒದಗಿಸುತ್ತಿದೆ ಎಂಬ ಪ್ರಶ್ನೆ ಕೂಡ ಬಹಳ ಮುಖ್ಯವಾಗಿದೆ. ಗ್ರಾಮಪಂಚಾಯತ್ ಮಂತ್ರಿಗಳಿಗೆ ಒಂದು ಶಿನ್‌ಸ್ಟಾರ್ಡ್ ಕ್ವೊಸ್ಚನ್ ಕೇಳಿದ್ದೆ. ಈ ರಾಜ್ಯದಲ್ಲಿ ಅತಿ ಕಡಿಮೆ ಆದಾಯ ಇದ್ದ ಗ್ರಾಮ ಪಂಚಾಯಿತಿಗಳಿಗೆ ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ಎಂದು ಅನೇಕ ಸಾರಿ ನಾನು ಈ ಸದನದಲ್ಲಿ ಪ್ರಶ್ನೆ ಕೇಳಿದ್ದೆ, ಸುಮಾರು 5040 ಗ್ರಾಮ ಪಂಚಾಯಿತಿಗಳು ಇರುವ ರಾಜ್ಯದಲ್ಲಿ ಆದಾಯ ಕಡಿಮೆ ಇದ್ದ ಗ್ರಾಮ ಪಂಚಾಯಿತಿಗಳಿಗೆ ಕನಿಷ್ಟ ಪಕ್ಷ ನೇರವಾಗಿ ರಾಜ್ಯ ಸರ್ಕಾರದಿಂದ 10 ಲಕ್ಷ ರೂಪಾಯಿ ಆದರೂ ಸಹಾಯ ಆ